# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE   Vol XXI - 4   ಏಪ್ರಿಲ್ 2003

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಶನ್‌ನಲ್ಲಿ : | | |
| ಸುಶ್ರಾವ್ಯ ವೀಣಾವಾದನ ಲಯಲಹರಿ | • ರಮಾ ವಸಂತ್ | 2 |
| Forthcoming Programmes | | 3-4 |
| ಭಾರತೀಯ ಕಲೆ - ಭಾಗ 13 | | |
| ಕೃಪೆ : ಎನ್. ಮಣಿಶಾಮಾಚಾರ್‌ರವರ ಭಾರತೀಯ ಕಲೆ | | 5 |
| **Interview :** | | |
| S.G.Vasudev | • M.A.N. Prasad | 8-9 |
| ಸುಶ್ರಾವ್ಯ ವೀಣಾವಾದನ ಲಯಲಹರಿ | • ಡಾ. ಸುಕನ್ಯಾ ಪ್ರಭಾಕರ್ | 10 |
| ಕೃತಿ ಪರಿಚಯ : | | |
| ತಿರುಪಲ್ಲಾಂಡು ಅನುವಾದ ಮೆಚ್ಚತಕ್ಕ ಪ್ರಸಾದರ ಪ್ರಯತ್ನ | • ಡಾ. ಜಿ. ಎನ್. ಉಪಾಧ್ಯ | 13 |
| ಕವನ : | | |
| ಮಾಸ್ತಿಯಾಗುವ ಹೂವು | • ಪ್ರೊ. ವಸಂತ ಕುಷ್ಟಗಿ | 13 |
| ಸುತ್ತ-ಮುತ್ತ | | 14 |


**Rs. 5/-**

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

ಅಸೋಸಿಯೇಷನ್‌ನಲ್ಲಿ

# ಸುಶ್ರಾವ್ಯ ವೀಣಾವಾದನ

ಮಾರ್ಚ್ ತಿಂಗಳ ೧೫ನೇ ತಾರೀಖು ಶನಿವಾರದಂದು ಮೈಸೂರು ಅಸೋಸಿಯೇಷನ್ನಿನಲ್ಲಿ ಶ್ರೀಮತಿ ಜಯಶ್ರೀ ಅರವಿಂದ್ ಅವರ ವೀಣಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು, ಸಂಜೆ ೬.೦೦ ಘಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಶ್ರೀಮತಿ ಜಯಶ್ರೀ ಅರವಿಂದ್ ಅವರು ನುರಿತ ವೀಣಾವಾದಕಿ ಇವರು 'ಸಂಗೀತ ಕಲಾನಿಧಿ' ಶ್ರೀ ಕೆ.ಎಸ್. ನಾರಾಯಣ ಸ್ವಾಮಿ ಅವರಲ್ಲಿ ಶಿಷ್ಯೆ, ಆಕಾಶವಾಣಿಯಲ್ಲಿ ಪ್ರಥಮ ದರ್ಜೆಯ ಕಲಾವಿದೆ, ಭಾರತದಲ್ಲಿಯೇ ಅಲ್ಲದೆ ವಿದೇಶಗಳಲ್ಲೂ ಇವರು ತಮ್ಮ ಕಾರ್ಯಕ್ರಮಗಳನ್ನು ನೀಡಿದ್ದಾರೆ. ನಗರದ ಎಸ್.ಸಿ.ಪಿ.ಎ. ಸಂಸ್ಥೆಯ ಕರ್ನಾಟಕ ಸಂಗೀತದ ಸಲಹೆಗಾರರಾಗಿದ್ದಾರೆ. ಇವರ ಜೊತೆಗೆ ಪಕ್ಕವಾದ್ಯದಲ್ಲಿ ಶ್ರೀ ಶಂಕರ ನಾರಾಯಣನ್ ಅವರು ಮೃದಂಗವನ್ನು ನುಡಿಸಿದರು. ಶ್ರೀ ಶಂಕರನಾರಾಯಣನ್ ಅವರು ಶ್ರೀ ಚಂದ್ರನಾಥ್ ಮತ್ತು ಉಮಯಾಳಪುರಂ ಶಿವರಾಮನ್ ಅವರಲ್ಲಿ ಶಿಷ್ಯತ್ವ ವಹಿಸಿದ್ದರು. ಅನೇಕ ಖ್ಯಾತ ಸಂಗೀತಗಾರರಿಗೆ ಪಕ್ಕವಾದ್ಯದಲ್ಲಿ ನೆರವು ನೀಡಿದ್ದಾರೆ.



ಜಯಶ್ರೀ ಅರವಿಂದ ಅವರಿಂದ ವೀಣಾ ವಾದನ ಮತ್ತು ಅವರೊಂದಿಗೆ ಶಂಕರ ನಾರಾಯಣ ಅವರು ಮೃದಂಗ ನುಡಿಸುತ್ತಿರುವ ದೃಶ್ಯ.

ಕಲಾವಿದರ ಪರಿಚಯದ ನಂತರ ಕಾರ್ಯಕ್ರಮವು ಆರಂಭವಾಯಿತು. ಭೈರವಿ ರಾಗದಲ್ಲಿ 'ವೀರೀ ಬೋಣಿ' ಎಂಬ ವರ್ಣದಿಂದ ಕಛೇರಿಯನ್ನು ಆರಂಭಿಸಿದರು. ತ್ಯಾಗರಾಜರ 'ತೆಲಿಯಲೇದುದುರಾಮ...., ಆನಂದಭೈರವಿ ರಾಗದ ಕೃತಿಯನ್ನು ನುಡಿಸಿ ಶ್ರೋತೃಗಳಿಗೆ ನಿಜವಾದ ಆನಂದವನ್ನು ನೀಡಿದರು. ಇನ್ನು ಅನೇಕ ಕೃತಿಗಳನ್ನು ನುಡಿಸಿ ''ದೇವಿ ಅನ್ನ ಪೂರ್ಣೆ'' ಎಂದು ಶ್ಲೋಕದಿಂದ ಕಾರ್ಯಕ್ರಮವನ್ನು ಮುಗಿಸಿದರು. ''ಅನ್ನಪೂರ್ಣೆ'' ಸ್ತೋತ್ರದ ಮಹಿಮೆಯನ್ನು ಹೇಳಿದರು. ೨ ಘಂಟೆಗಳ ಕಾಲ ವೀಣೆಯ ಇಂಪಾದ ಝೇಂಕಾರದಿಂದ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿದ್ದರು. ಅಸೋಸಿಯೇಷನ್ನಿನ ಉಪಾಧ್ಯಕ್ಷೆ ಶ್ರೀಮತಿ ಲೀಲಾರಾಜ್ ಕುಮಾರ್ ಅವರು ಕಲಾವಿದರಿಗೆ ಪುಷ್ಪಗುಚ್ಛವನ್ನಿತ್ತು ಗೌರವಿಸಿದರು. ಶ್ರೀ ಪ್ರಸಾದ್ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು.

- ರಮಾವಸಂತ್

# ಲಯ ಲಹರಿ

**ಸೊಬಗಿನ ಸಂಗೀತ ಸಂಜೆ**

ಪಕ್ಕ ವಾದ್ಯಗಳನ್ನು ಪ್ರಮುಖ ವಾದ್ಯಗಳಾಗಿ ನುಡಿಸಿದಾಗ ಅದರ ಘನತೆಯೇ ಬೇರೆ, ತೂಕವೇ ಬೇರೆ, ಶ್ರೋತೃಗಳು ಅದರ ಆನಂದವನ್ನು ಸವಿಯುವ



ಅಸೋಸಿಯೇಷನ್ನಿನ ಅಧ್ಯಕ್ಷರಾದ ದೊರೆಸ್ವಾಮಿಯವರು ಲಯಲಹರಿಯ ಪುಷ್ಪ ಕಾಶೀನಾಥ ಅವರಿಗೆ ಹೂ ಗುಚ್ಛ ಕೊಟ್ಟು ಸನ್ಮಾನಿಸುತ್ತಿರುವುದು.


FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750

# ಲಯ ಲಹರಿ

(೧ನೇ ಪುಟದಿಂದ)

ಕ್ರಮವೇ ಬೇರೆ. ತ್ಯಾಗರಾಜರು ಹೇಳಿದ್ದಾರೆ. ''ಸೊಗಸುಗಾ ಮೃದಂಗ ತಾಳಮು...'' ಎಂದು ಗೋಳು ಹೇಳುತ್ತದೆ. ಅಯವರಿತು ಹೊಡೆಯ ಮಧುರಗಾನಕ್ಕಾದೆ ಎಂದು. ಹೀಗೆ ಅಯವರಿತು ನುಡಿಸಿದಲ್ಲಿ ಮೃದಂಗವಾಗಲಿ, ತಬಲವಾಗಲಿ, ಖಂಜಿರ, ಘಟ, ಡೋಲು, ಮೋರ್ಚಿಂಗ್... ಮುಂತಾದ ಯಾವುದೇ ವಾದ್ಯವು ಮಧುರಗಾನವನ್ನು ನೀಡುತ್ತದೆ. ಮುರಳೀಯಕರೆಗೆ, ವೀಣೆಯ ಝೇಂಕಾರಕ್ಕೆ ಮೋಹಿತರಾಗದವರಾರು?

ಮಾರ್ಚ್ ೨೪ರಂದು ಸಂಜೆ ಮೈಸೂರು ಅಸೋಸಿಯೇಷನ್ನಿನಲ್ಲಿ 'ಲಯಲಹರಿ' ಎಂಬ ತಾಳವಾದ್ಯಗಳ ಕಚೇರಿಯನ್ನು ಏರ್ಪಡಿಸಲಾಗಿದ್ದಿತು. ಬೆಂಗಳೂರಿನಿಂದ ಬಂದ ೧೨ ಜನ ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕರ್ನಾಟಕ ಸಂಗೀತದ, ದಿಗ್ಗಜರಾದ ಸಂಗೀತ ಕಲಾನಿಧಿ ಮೈಸೂರು ಟಿ. ಚೌಡಯ್ಯನವರು ೧೯೫೦ರಲ್ಲಿ ಶ್ರೀ ಅಯ್ಯನಾರ್ ಪ್ರೌಢ ಸಂಗೀತ ಕಲಾ ಶಾಲೆಯನ್ನು ಸ್ಥಾಪಿಸಿದರು. ಚೌಡಯ್ಯನವರ ಇಷ್ಟದೈವ ಅಯ್ಯಪ್ಪ ಅಪ್ಪರಿಂದ ಶಾಲೆಗೆ ಅಯ್ಯನಾರ್ ಎಂಬ ಹೆಸರಿಡಲಾಯಿತು. ಈ ಶಾಲೆಯ ಮೂಲಕ ಹಿರಿಯ ವಿದ್ವಾಂಸರಿಂದ ಎಲ್ಲಾ ಸಂಗೀತಾಭಿಲಾಷಿಗಳೂ ಸಂಗೀತ ಕಲಿಯುವುದು ಸಾಧ್ಯವಾಗುವಂತೆ ಮಾಡಿದ ಹಿರಿಮೆ ಚೌಡಯ್ಯನವರಿಗೆ ಸಲ್ಲುತ್ತದೆ. ೧೯೫೦ರಿಂದ ಸುಮಾರು ೧೭ ವರ್ಷಗಳ ಕಾಲ ತಾವೇ ಈ ಕಲಾಶಾಲೆಗೆ ಪ್ರಾಂಶುಪಾಲರಾಗಿ ಚೌಡಯ್ಯನವರು ಸೇವೆ ಸಲ್ಲಿಸಿದರು. ಅವರ ಕಾಲಾನಂತರ ೧೯೬೭ರಿಂದ ೧೯೯೮ರ ವರೆಗೆ ಈ ಸಂಸ್ಥೆಯ ಸೇವೆ ಸಲ್ಲಿಸಿ, ಅದರ ಗುಣ ಮಟ್ಟವನ್ನು ಬೆಳೆಸಿದ ಕೀರ್ತಿಯು ವಿದ್ವಾನ್ ಆನೂರು ಎಸ್ ರಾಮಕೃಷ್ಣ ಅವರಿಗೆ ಸಲ್ಲುತ್ತದೆ.

ಚೌಡಯ್ಯನವರ ಕಾಲದಿಂದಲೇ ಈ ಶಾಲೆಯಲ್ಲಿ ಪ್ರತಿವಾರ ಸಂಗೀತ ಕಾರ್ಯಕ್ರಮ ನಡೆಯುತ್ತಾ ಬಂದಿದೆ. ಮುಂದಕ್ಕೆ ಇಲ್ಲಿ ಅನೇಕ ವರ್ಕಷಾಪ್‌ಗಳು, ಸಂಗೀತ ರೂಪಕಗಳು, ನಾದೋಪಾಸಿನಿ ಎಂಬ ಸಂಗೀತ ಸರಣಿ, ಇತ್ಯಾದಿಗಳು ನಡೆಯುತ್ತಾ ಬಂದಿವೆ.

'ಲಯಲಹರಿ' ಈ ಕಲಾಶಾಲೆಯ ಒಂದು ವಿಶೇಷ ಕೊಡುಗೆ. ೧೯೮೦ರಲ್ಲಿ ವಿದ್ವಾನ್ ಆನೂರು ರಾಮಕೃಷ್ಣ ಮತ್ತು ವಿದ್ವಾನ್ ಬೆಂಗಳೂರು ಕೆ. ವೆಂಕಟ್ರಾಮ್ ಸೇರಿ

# THE MYSORE ASSOCIATION, BOMBAY

## FORTH COMING PROGRAMMES

| Date | Programme | Time | Venue |
|---|---|---|---|
| 11th April 03 | Rame Navami Celebration<br>Dehajan by the members of Mysore Association following by<br>Pooja & Prasada Viniyoga | 6.30p.m | Ground Floor |
| 15th April 03 | Weekly Ganapathi Pooja<br>Ganapati Shasra Nama Archane<br>Prasada Viniyoga<br>Sevartha Rs.25/- | 7.30p.m | Ground Floor |
| 19th April 03 | Sankashta Chaturthi Ganapathi Pooja<br>Ganapathi Shasra Name Archane<br>Sevartha Rs.51/- | 7.30p.m | Ground Floor |
| 22nd April 03 | Weekly Ganapathi Pooja<br>Ganapati Shasra Nama Archane<br>Prasada Viniyoga<br>Sevartha Rs.25/- | 7.00p.m | Auditorium<br>2nd Floor |
| 28th April 03 | Play Reading<br>Ginsh Karnads "Haina Hunja"<br>followed by discussion | 7.30p.m | Ground Floor |
| 29th April 03 | Weekly Ganapathi Pooja<br>Ganapati Shasra Nama Archane<br>Prasada Viniyoga<br>Sevartha Rs. 25/- | | |
| 4th May 03 | Akshaya Tritiya Maha<br>Ganapathi Pooja | 9.30a.m | |
| | Ganapathi Pooja &<br>Ganapathi Homa | 10.30a.m | |
| | Navagraha Pooja &<br>Navagraha Homa | 11.30a.m | Ground Floor |
| | Poomahuti, Naivedyan | 12.30p.m | |
| | Maha Mangalarathi,<br>Mantrapushpam Prasada Viniyoga<br>Sevartha Rs.101/- | 1.00 p.m | |
| 6th May 03 | Weekly Ganapathi Pooja<br>Ganapathi Sahasra Nama Archane | 7.30p.m | Ground Floor |

## The Mysore Association, Bombay
### along with
## IPTA, Mumbai & Yatri, Mumbai

*Present*

# RANG SHIBIR

**Three Theatre Workshops for Children during Summer Holidays**

**1st to 10th May 2003, 14th to 24th May 2003 and 27th May to 7th June 2003**

workshops will be conducted by Om Katare & Shaili Sathyu

| Workshop Title | Age Group | Dates & Timing | Conducted by |
|---|---|---|---|
| Puppetry | 6 to 9 yrs | 1st to 10th May<br>10.00 a.m. to 1.00 p.m. | Ms. Shaili Sathyu |
| Know yourself | 10 to 16 yrs | 14th to 24th May<br>10.00 a.m. to 1.00 p.m. | Mr. Om Katare |
| Games & Improvisations | 10 to 16 yrs | 27th May to 7th June<br>10.00 a.m. to 1.00 p.m. | Mr. Om Katare & Ms. Shaili Sathyu |

The workshops will cover various aspects such as puppet making, watching puppet shows, collage & crafts, movement, speech, sound, skits, singing, dancing, games, improvisations, group activity etc. All these features are taught to the child in an enjoyable manner and hence are readily accepted by the child. It will help your child in getting the right stance, posture, voice modulation, etc. overcome shyness or self consciousness and make the child become more self confident and out going. Working in a group it self offers many advantages. In fact the workshop will help the child in developing its personality.

**Venue** : The Mysore Association, Bombay
393, Bhaudaji Road, Matunga,
Mumbai-400 019.
Phone : 2402 4647/2403 7065
Fax : 2401 0574

**Fee** : Rs. 750/- per participant/workshop

**LIMITED SEATS ONLY**
**HURRY UP! REGISTER YOUR NAME TODAY.**

ಈ ಲಯ ವಾದ್ಯವೃಂದವನ್ನು ಪ್ರಾರಂಭಿಸಿದರು. ನಮ್ಮಲ್ಲಿ ಅನೇಕ ತಾಳವಾದ್ಯಗಳು ಜಾನಪದ ಸಂಗೀತದಲ್ಲಿ ಉಪಯೋಗಿಸಲಾಗುತ್ತದೆ. ಆದರೆ ಇದನ್ನು ಶಾಸ್ತ್ರೀಯ ಸಂಗೀತದಲ್ಲಿ ಉಪಯೋಗಿಸುವುದಿಲ್ಲ. ಲಯಲಹರಿ ಈ ಸಂಪ್ರದಾಯವನ್ನು ಬಿಟ್ಟು ಡೋಲು, ಚೆಂಡೆ, ಸಮ್ಮೇಳ, ಡೊಳ್ಳು ಇತ್ಯಾದಿ ವಾದ್ಯಗಳನ್ನು ಮೃದಂಗ, ಘಟ, ಕಜೀರ, ಮೋರ್ಚಿಂಗ್, ತಬಲಾ, ಪಕ್ವಾಜ್ ಇವುಗಳೊಂದಿಗೆ ಸೇರಿಸಿ ಕೊಂಡಿದೆಯಲ್ಲದೆ, ಪಾಶ್ಚಾತ್ಯ ಸಂಗೀತದಲ್ಲಿ ಉಪಯೋಗಿಸುವ ರಿದಮ್ ಪ್ಯಾಡ್ಸನ್ನೂ ಇವೊಂದಿಗೆ ಸೇರಿಸಿಕೊಂಡಿದೆ. ಲಯಲಹರಿ ಕಳೆದ ಎರಡು ದಶಕಗಳಲ್ಲಿ ದೇಶಾದ್ಯಂತ ಕಾರ್ಯಕ್ರಮಗಳನ್ನು ನೀಡಿರುವುದಲ್ಲದೇ ಅಂತ ರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಯೂ ಭಾಗವಹಿಸಿದೆ. ಭಾರತದ ರಾಷ್ಟ್ರಪತಿಯ ಮುಂದೆ ಕಾರ್ಯಕ್ರಮನೀಡಿದೆ. ಸಂಗೀತ ರಸಿಕರು ಹಾಗೂ ವಿಮರ್ಶಕರಿಂದ ಮನ್ನಣೆ ಗಳಿಸಿದೆ.

ಕಲಾವಿದರ ಪರಿಚಯವನ್ನು ಶ್ರೀ ಮ.ಅ.ನಾ. ಪ್ರಸಾದ್‌ರವರು ಮಾಡಿಕೊಟ್ಟರು. ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಅವರು ಕಲಾವಿದರಿಗೆ ಪುಷ್ಪಗುಚ್ಛವನ್ನು ನೀಡಿ ಗೌರವಿಸಿದರು, ನಂತರ ಕಾರ್ಯಕ್ರಮವು ಆರಂಭವಾಯಿತು, ವಾಡಿಕೆಯಂತೆ 'ಹಂಸಧ್ವನಿ' ರಾಗದ 'ವಾತಾಪಿಗಣಪತಿ...' ಎಂಬ ದೀಕ್ಷಿತರ ಕೃತಿಯನ್ನು ನುಡಿಸಿದರು. ನಂತರ ತ್ಯಾಗರಾಜರು ರಚಿಸಿದ 'ಎಂದರೋ ಮಹಾನುಭಾವುಲು...' ಈ ಕೃತಿಯು ಎಲ್ಲ ವಾದ್ಯಗಳ ಸ್ವರಗಳ ಮಿಳಿತಕ್ಕೆ ಹೇಳಿ ಮಾಡಿಸಿದಂತಿತ್ತು. ಕಾರ್ಯಕ್ರಮದ ಮುಖ್ಯ ಘಟ್ಟದಲ್ಲಿ ವಾಚಸ್ಪತಿ ರಾಗದಲ್ಲಿ ''ಮಂಗಲ ಪಾರ್ವತಿ ಜಗದೀಶ್ವರಿ '' ಪಲ್ಲವಿಯನ್ನು ನುಡಿಸಿದರು. ನಂತರ ತನಿ ಆವರ್ತದಲ್ಲಿ ಮೃದಂಗ, ಕಂಜೀರ, ತಬಲ, ಘಟ. ಕೊನಕ್ಕೊಲ್, ರಿದಮ್ ಪ್ಯಾಡ್ಸ್, ಡೊಳ್ಳು, ಡೋಲು, ಪಕ್ವಾಜ್ ಮತ್ತು ಮೋರ್ಚಿಂಗ್ ಹೀಗೆ ೧೦ ವಾದ್ಯಗಳ ನಾದಗಳು ಮಿಳಿತವಾಗಿ ಶ್ರೋತೃಗಳನ್ನು ಆನಂದದ ಸೀಮಾತೀತಕ್ಕೊಯ್ದರು. ಶ್ರೋತೃಗಳ ಕೋರಿಕೆಯ ಮೇರೆಗೆ ಒಂದು ತಿಲ್ಲಾನವನ್ನು ನುಡಿಸಿ ಮಂಗಳದೊಂದಿಗೆ ಮುಕ್ತಾಯ ಮಾಡಿದರು.

+

# ಭಾರತೀಯ ಕಲೆ

**ಭಾಗ - 13**

**ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ - ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.**

ಪ್ರಾಚೀನ ಭಾರತೀಯ ಕಲೆಯ ಮತ್ತೊಂದು ಮುಖ್ಯ ಲಕ್ಷಣವೇನೆಂದರೆ ಮೂರನೇ ಪರಿಮಾಣವನ್ನು ಭಾವಿಸಿಕೊಳ್ಳುವುದು. ವಸ್ತುವಿನ ಉದ್ದ, ಅಗಲ ಮತ್ತು ಗಾತ್ರಗಳ ಬಗ್ಗೆ ಊಹಿಸಿ ಚಿತ್ರರಚನೆಯನ್ನು ಮಾಡುವುದು. ಕಲಾವಿದರು ವಸ್ತುಗಳನ್ನು ತಾವು ಕಂಡಹಾಗೆ ಚಿತ್ರಿಸಲಿಲ್ಲ. ಆದರೆ ಅವು ಭೌತಿಕವಾಗಿ ಹೇಗೆ ಇವೆಯೋ, ಹಾಗೇ ರೂಪಿಸಿದ್ದಾರೆ. ವಾಸ್ತವವಾಗಿ ಅವುಗಳ ಅಸ್ತಿತ್ವವನ್ನು ಪ್ರತಿನಿಧಿಸಿದ್ದಾರೆಯೇ ಹೊರತು ತಮ್ಮ ಕಣ್ಣು ಅವುಗಳನ್ನು ಕಂಡ ಹಾಗೆ ರೂಪಿಸಲಿಲ್ಲ. ಯಥಾದೃಷ್ಟ ರೂಪಣದ ಚಿತ್ರ ನಿಯಮಗಳಿಗೆ ಅವರು ಪ್ರಾಶಸ್ತ್ಯ ನೀಡಲಿಲ್ಲ. ಒಂದು ವಸ್ತುವನ್ನು ನಾವು ನೋಡಿದಾಗ ಒಂದೇ ಸಮಯದಲ್ಲಿ ಎಲ್ಲಾ ಕೋನಗಳಿಂದಲೂ ಆ ವಸ್ತುವನ್ನು ನಾವು ದೃಷ್ಟಿಸಲಾಗುವುದಿಲ್ಲ. ಆ ವಸ್ತುವಿನ ಕೆಲವು ಭಾಗಗಳು ಮರೆಯಾಗಿ ಉಳಿಯುತ್ತದೆ. ಕಾರಣ ಅವು ನಮಗೆ ಕಾಣಿಸುವುದಿಲ್ಲವಾದ್ದರಿಂದ, ಪ್ರಾಚೀನ ಕಲಾವಿದರು ಮೂರನೆಯ ಪರಿಮಾಣವನ್ನು ಊಹಿಸದಿದ್ದರೂ, ತಮ್ಮ ಮುಂದೆ ಇರುವ ವಸ್ತುವಿನ ಒಂದು ಭಾಗವು ತಮಗೆ ಕಾಣಿಸದಂತೆ ಇರುವುದನ್ನು ತಿಳಿದು ಕೊಂಡಿದ್ದರು. ವ್ಯಕ್ತಿಗಳನ್ನು ಚಿತ್ರಿಸುವಾಗ ಮಹತ್ವವಾದ ವ್ಯಕ್ತಿತ್ವ ಉಳ್ಳವರನ್ನು ದೊಡ್ಡದಾಗಿ ಚಿತ್ರಿಸಿ, ಇತರರನ್ನು ಗಾತ್ರದಲ್ಲಿ ಚಿಕ್ಕದಾಗಿ ರಚಿಸು ತ್ತಿದ್ದರು.

ಬುದ್ಧನಿಗೆ ಜ್ಞಾನೋದಯವಾದ ಸ್ಥಳ ಬೋಧಗಯಾದಲ್ಲಿ ಒಂದು ವೇದಿಕೆಯ ತುಸು ಭಾಗ ಉಳಿದುಕೊಂಡಿದೆ. ಇದು ಬೋಧಿ ವೃಕ್ಷದ ಸುತ್ತಲೂ ಇದೆ. ಭಾರ್ಹುಟ್‌ನ ಕೃತಿಗಳ ಹಾಗೆ ಇಲ್ಲಿಯ ಕಟಾಂಜನದಲ್ಲೂ ಕೆತ್ತನೆಗಳಿವೆ. ಕೊಂಬೆಯಲ್ಲಿ ಕಮಲದ ಹೂಗಳುಳ್ಳ ಅಲಂಕಾರಪಟ್ಟಿ, ತಾಬಾದ ಮೇಲೆ ಕಮಲದ ಪದಕಗಳು, ಕೆಲವು ಪದಕಗಳ ಮಧ್ಯೆ ಮಾನವಶಿರಗಳು ಅಥವಾ ಮುಖ ಅಥವಾ ಒಂದು ಪ್ರಾಣಿಯ ಚಿತ್ರವನ್ನು ರಚಿಸಲಾಗಿದೆ. ತಾಬಾಗಳಲ್ಲಿರುವ ಅರ್ಧದಷ್ಟು ಪದಕಗಳಲ್ಲಿ ಜಾತಕ ಕಥೆಗಳನ್ನು ಅಸ್ಪಷ್ಟವಾಗಿ ಕೆತ್ತಲಾಗಿದೆ. ಮಾನವ ಶರೀರಗಳನ್ನು ಬಾರ್ಹುಟ್‌ನಲ್ಲಿ ಯವುಗಳಿಗಿಂತ ತುಂಬಾ ನೈಜವಾಗಿ ಚಿತ್ರಿಸಲಾಗಿದೆ.

ಬೋಧಗಯಾದ ಒಂದು ತಾಬಾದ ಮೇಲೆ ನಾಲ್ಕು ಅಶ್ವಗಳುಳ್ಳ ರಥವನ್ನು ಓಡಿಸುತ್ತಿರುವ ಸೂರ್ಯನನ್ನು ಚಿತ್ರಿಸಲಾಗಿದೆ. ಎರಡು ಕುದುರೆಗಳು ಎಡಕ್ಕೂ, ಇನ್ನೆರಡು ಬಲಕ್ಕೂ ಮುಖ ಮಾಡಿವೆ. ಕುದುರೆಗಳ ರಚನೆಯಲ್ಲಿ ಪರಿಮಾಣ ವೈಚಿತ್ರ್ಯತೆಯನ್ನು ಕಾಯ್ದುಕೊಳ್ಳಲಾಗಿದೆ. ಇದೇ ವೈಚಿತ್ರ್ಯವನ್ನು ಸೂರ್ಯ ಇಕ್ಕೆಲಗಳಲ್ಲಿ ಬಿಲ್ಲು, ಬಾಣಗಳನ್ನು ಹಿಡಿದು ಕುಳಿತುಕೊಂಡಿರುವ ಇಬ್ಬರು ಸ್ತ್ರೀಯರ ರಚನೆಯಲ್ಲೂ ತೋರಲಾಗಿದೆ. ಎರಡು ಕಡೆ ಇರುವ ರಾಕ್ಷಸರನ್ನು ಮೇಲೆ ಮೇಲೆ ಹರಡಿದಂತೆ ಕಾಣಿಸಿ ಚಿತ್ರದ ಆಳವನ್ನು ಪ್ರಕಟಿಸಲಾಗಿದೆ. ಬೋಧಗಯಾದ ಒಂದು ತಾಬಾದ ಮೇಲೆ ವೈಧಿಕ ದೇವತೆಯಾದ ಇಂದ್ರನನ್ನು ಪ್ರತಿನಿಧಿಸಲಾಗಿದೆ. ಅವನು ಮುದುಡುಕೊಂಡಿರುವ ಒಂದು ಪ್ರಾಣಿಯ ಮೇಲೆ ಕುಳಿತಿದ್ದು, ಅದರ ಪೃಷ್ಠದ ಮೇಲೆ ತನ್ನ ಎಡಗಾಲನ್ನು ಅತಂತ್ರವಾಗಿ ಇಟ್ಟಿರುವನು. ಮುಂದೆ ಇರುವ ವಸ್ತುವನ್ನು ಕಂಡು ಭಯದಿಂದ ಇರುವ ಹಾಗೆ ನೈಜವಾಗಿ ಚಿತ್ರಿತವಾಗಿದೆ.

ಒಂದು ತಾಬಾದ ಮೇಲೆ ಕೆತ್ತಲಾದ ಚಿತ್ರವು ತುಂಬಾ ಕುತೂಹಲಕಾರಿಯಾಗಿ ಕಾಣಿಸುತ್ತದೆ. ಒಬ್ಬ ಮನುಷ್ಯನು ಮರ ಹತ್ತುತ್ತಿರುವ ಒಬ್ಬ ತರುಣಿಗೆ ಸಹಾಯ ಮಾಡುತ್ತಿರುವನು. ಅವನು ಕೆಳಗೆ ಕುಳಿತಿದ್ದು ಮರದ ಬುಡವನ್ನು ಒಂದು ಕೈಯಿಂದ ಹಿಡಿದು, ಮತ್ತೊಂದು ಕೈಯಿಂದ ಆ ತರುಣಿಯ ಬಲಗಾಲಿಗೆ ಆಧಾರ ನೀಡುತ್ತಿರುವನು. ಅವಳ ಹಾಗೂ ಅವಳು ಮರವನ್ನು ಹಿಡಿದುಕೊಂಡಿರುವ ಭಂಗಿಗಳು ಚುಲಕೋಕ ದೇವತೆಯನ್ನು ನೆನಪಿಸುವಂತಿದೆ. ಸಂಪೂರ್ಣ ಅಂಕಣದ ಸುತ್ತಲೂ ಅಲೆಯಾಕಾರದ ರೇಖೆ ಅವಳ ಎತ್ತಿದ ಕೈಯಿಂದ ಕೆಳಗೆ ಮನುಷ್ಯನ ಪಾದಗಳವರೆಗೂ ವ್ಯಾಪಿಸಿದೆ.

ಭಾರ್ಹುಟ್‌ನ ಕಲಾವಿದರು ಭಾವ ಹಾಗೂ ಉದ್ವೇಗಗಳನ್ನು ಪ್ರಕಟಿಸುವಲ್ಲಿ ಒಂದು ರೀತಿಯ ಮಿತಿಯನ್ನು ತೋರಿದ್ದಾರೆ. ಸುತ್ತಲಿನ ಪರಿಸರಕ್ಕೆ ಹೊಂದದ ಹಾಗೆ ಆಕೃತಿಗಳನ್ನು ರಚಿಸಲಾಗಿದೆ. ವಿವರಣೆಯಲ್ಲಿ ತಾವೇ ಒಂದು ಮಿತಿಗೆ ಒಳಪಟ್ಟಂತೆ ಕಾಣುತ್ತದೆ. ಆದರೆ ಬೋಧ ಗಯಾದಲ್ಲಿ ಘಟನೆ ಅಥವಾ ಆಕೃತಿಗಳ ವಿವರಣೆಯಲ್ಲಿ ನಯ ಹಾಗೂ ನಿರ್ಭಯತೆಯನ್ನು ಕಾಣುತ್ತೇವೆ. ಜಾತಕ ಕಥೆಗಳು ಈಗಾಗಲೇ ತುಂಬಾ ಪ್ರಚಲಿತವಾಗಿದ್ದುದರಿಂದ, ಅವುಗಳ ಶಿಲ್ಪ ರಚನೆಯಲ್ಲಿ ಹೆಚ್ಚಿನ ವಿವರಣೆಯ ಅಗತ್ಯವಿರಲಿಲ್ಲ. ಬೋಧಗಯಾದ ರಚನೆಗಳಲ್ಲಿ ಚಿತ್ರದಿಂದ ಚಿತ್ರಕ್ಕೆ ಇರುವ ಆಂತರಂಗಿಕ ಸಂಬಂಧವನ್ನು ತುಂಬಾ ಸಲೀಸಾಗಿಯೂ, ಹೆಚ್ಚು ಕಲಾತ್ಮಕವಾಗಿಯೂ ಮುಂದುವರೆಸಲಾಗಿದೆ.

ಆದಿಶಾತವಾಹನರ ಅಥವಾ ಆಂಧ್ರರ ಯುಗ

ಕ್ರಿ.ಪೂ. ಮೊದಲೇ ಶತಾಬ್ದಿಯು ಶಾತವಾಹನ ರಾಜವಂಶವು (ಆಂಧ್ರರು ಎಂತಲೂ ಕರೆಯಲಾಗಿದೆ) ಅಭಿವೃದ್ಧಿ ದಿಶೆಯಲ್ಲಿ ಏರುತ್ತಿರುವುದನ್ನು ಕಂಡಿತು. ದಖನ ಪ್ರಸ್ಥ ಭೂಮಿಯಲ್ಲಿ ಕ್ರಿ.ಶ. ಮೂರನೇ ಶತಮಾನದವರೆಗೂ ಇವರದೇ ಮೇಲುಗೈಯಾಗಿತ್ತು. ಉತ್ತರ ಮಹಾರಾಷ್ಟ್ರದ ಕೆಲವು ಭಾಗಗಳು. ಪೂರ್ವ ಮತ್ತು ಪಶ್ಚಿಮ ಪ್ರದೇಶಗಳು ಇವರ ಸಾಮ್ರಾಜ್ಯದಲ್ಲಿ ಸೇರ್ಪಡೆಯಾಗಿದ್ದವು. ಇವರು ತಮ್ಮ ಆಡಳಿತವನ್ನು ರಾಜಧಾನಿಯಾದ ಪ್ರತಿಷ್ಠಾನ (ಈಗಿನ ಔರಂಗಾಬಾದ್ ಜಿಲ್ಲೆಯ ಪೈಥಾನ್)ದಿಂದ ಕೈಕೊಂಡಿದ್ದರು. ಇವರ ವಂಶಾವಳಿಯನ್ನು ತಿಳಿಸುವ ಶಿಲಾಶಾಸನಗಳು ನಾನಾಘಾಟ್ ಗುಹೆ (ಪುಣೆ ಜಿಲ್ಲೆ)ಯಲ್ಲಿ ದೊರೆತಿವೆ. ಈ ವಂಶಾವಳಿಯ ರಾಣಿ ನಯನಿಕ (ನಾಗನ್ನಿಕ), ಮೊದಲನೇ ಶಾತಕರ್ಣಿಯ ಪತ್ನಿ, ಹಾಗೂ ಇನ್ನಿತರ ಏಳು ಅರಸರ ಹೆಸರುಗಳನ್ನು ಈ ಶಿಲಾ ಶಾಸನಗಳಲ್ಲಿ ಕಾಣಬಹುದು.

ಈ ಆದಿ ಶಾತವಾಹನರ ಆಳ್ವಿಕೆಯ ಕಾಲದಲ್ಲಿ, ಭಾರ್ಹುಟ್ ಮತ್ತು ಬೋಧಗಯಾಗಳಲ್ಲಿ ಪ್ರಾರಂಭವಾದ ಕಲಾ ಹಂತವು ಮಧ್ಯ ಪ್ರದೇಶದ ವಿದಿಶ ಹತ್ತಿರುವ ಸಾಂಚಿ ಎಂಬಲ್ಲಿ ಅದರ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ಒಂದೇ ಶಾತಕರ್ಣಿಯ ಆಡಳಿತದ ಕಾಲದಲ್ಲಿ ಸಾಂಚಿಯ ಮೊದಲನೆಯ ಸ್ತೂಪದಲ್ಲಿ ನಾಲ್ಕು ತೋರಣಗಳನ್ನೂ ಮೂರನೆ ಸ್ತೂಪದಲ್ಲಿ ಒಂದು ತೋರಣವನ್ನೂ ಸ್ಥಾಪಿಸಿದನು. ಆ ತೋರಣಗಳ ಮೇಲೆ ಬಿಡಿಸಿರುವ ಶಿಲ್ಪ ಚಿತ್ರಗಳನ್ನು ಕಾಣಬಹುದು. ದಕ್ಷಿಣ ಹೊರ ದ್ವಾರದ ಮೇಲಿನ ಕಮಾನಿನಲ್ಲಿ ಕೆತ್ತಲ್ಪಟ್ಟಿರುವ ಶಾಸನ ಆನಂದನೆಂಬ ಮುಖ್ಯಸ್ಥ ಕೆಲಸಗಾರನು ಅರಸನಿಗೆ ಅಂದರೆ ಒಂದನೇ ಶಾತಕರ್ಣಿಗೆ ನೀಡಿದ ಕಾಣಿಕೆ ಎಂದು ಹೇಳುತ್ತದೆ. ದಕ್ಷಿಣದ ತೋರಣ ತುಂಬಾ ಹಳೆಯದು. ನಂತರ ಕಾಲಾನುಕ್ರಮವಾಗಿ ಉತ್ತರ, ಪೂರ್ವ, ಪಶ್ಚಿಮ ತೋರಣಗಳು ಸ್ಥಾಪಿಸಲ್ಪಟ್ಟವು. ನಾಲ್ಕೂ ತೋರಗಳ ನಿರ್ಮಾಣ ಹಾಗೂ ಸ್ಥಾಪನೆಯಲ್ಲಿ 5 ದಶಕಗಳಿಗೂ

ಕಡಿಮೆ ಕಾಲಾವಧಿಯನ್ನು ತೆಗೆದುಕೊಳ್ಳಲಾಯಿತು. ಬಾಲಮಿತ್ರ, ನಾಮಸಿಯ ಎಂಬ ಶಿಲ್ಪಕಲಾಕಾರರು ಈ ತೋರಣಗಳ ನಿರ್ಮಾಣದಲ್ಲಿ ತಮ್ಮ ಸೇವೆ ಸಲ್ಲಿಸಿದರು.

ತೋರಣಗಳ ಬಹುಭಾಗ ಚಿತ್ರಗಳ ಕೆತ್ತನೆಗೆ ಉಪಯೋಗಿಸಲ್ಪಟ್ಟಿದೆ. ದ್ವಾರ ಬಂಧದ ಕಂಬ ತೋಳುಗಳು, ಸ್ತಂಭಾಗ್ರಗಳು ಮತ್ತು ಅಡ್ಡಪಟ್ಟಿಗಳು ಮುಂತಾದುವುಗಳೆಲ್ಲಾ ಎಲ್ಲಿಯೂ ಖಾಲಿ ಸ್ಥಳ ಬಿಡದೆ, ಸುಂದರವಾದ ಚಿತ್ರಗಳ ಕೆತ್ತನೆಯಿಂದ ಅಲಂಕಾರಗೊಳಿಸಲಾಗಿದೆ. ಭಾರ್ಹೂಟ್‌ನಲ್ಲಿಯ ಹಾಗೆ ಕೆತ್ತನೆಗಳು ಸಪಾಟಾಗಿಲ್ಲದೆ ಇಲ್ಲಿ ಹೆಚ್ಚು ಉಬ್ಬನ್ನು ಹೊಂದಿವೆ. ಚಿತ್ರಗಳು ಗುಂಪು ಗುಂಪಾಗಿದ್ದು ಮಸುಕಾದ ಹಿನ್ನೆಲೆಯನ್ನು ಹೊಂದಿವೆ. ಸೂರ್ಯನ ಬೆಳಕಿನಲ್ಲಿ ಚಿತ್ರಗಳು ತುಂಬಾ ಸೊಗಸಾಗಿ ಕಾಣಲು ಇಂತಹ ವ್ಯವಸ್ಥೆ ಮಾಡಲಾಗಿದೆ.

ಎಲ್ಲಾ ಚಿತ್ರಗಳು ಜಾತಕ ಕಥೆಗಳು ಮತ್ತು ಬುದ್ಧನ ಜೀವನ ಚರಿತ್ರೆಯ ಪ್ರಸಂಗಗಳನ್ನೂ ಪ್ರತಿನಿಧಿಸುತ್ತವೆ. ಕಂಬಗಳ ತೋಳು, ಸ್ತಂಭಾಗ್ರ ಮತ್ತು ಅಡ್ಡಪಟ್ಟಿಗಳ ಮೇಲೆ ಆಯತಾಕಾರದಲ್ಲಿ ಕೆತ್ತಲಾಗಿದೆ. ದುಂಡಗಿನ ಪದಕಗಳಲ್ಲಿ ಕೆತ್ತಬಹುದಾದ ವಿಷಯಕ್ಕಿಂತಲೂ ಹೆಚ್ಚಾಗಿ ಇಲ್ಲಿ ಘಟನಾವಳಿಗಳನ್ನು ವಿವರಿಸಲು ಸುಲಭ ಸಾಧ್ಯವಾಗಿದೆ. ಕಥೆಗಳಲ್ಲಿ ಬರುವ ಸೂಕ್ಷ್ಮಾತಿ ಸೂಕ್ಷ್ಮ ಸಂದರ್ಭಗಳನ್ನು ಸಹ ಇಲ್ಲಿ ವಿವರಿಸಲು ಶಕ್ಯವಾಗಿದೆ. ಐಹಿಕ ಜಗತ್ತಿನ ವಿಷಯಗಳಲ್ಲಿ ಕಲಾಕಾರನಿಗಿರುವ ಒಲವು ಗ್ರಹಿಸಬಹುದಾಗಿದೆ. ಅರಸನ ದರ್ಬಾರು, ಸೇನಾ ಮೆರವಣಿಗೆ, ಅರಮನೆಗಳು, ದುರ್ಗಮವಾದ ನಗರಗಳು, ಗುಡಿಸಲುಗಳು, ಗ್ರಾಮ ಜೀವನ ಹೀಗೆ ಪ್ರಾಚೀನ ಭಾರತದ ಜನ ಜೀವನ ವೈಖರಿಯನ್ನು ತುಂಬಾ ರಸವತ್ತಾಗಿ ಕೆತ್ತನೆಗಳ ಮೂಲಕ ಪ್ರದರ್ಶಿಸಲಾಗಿದೆ.

ಬಿಡಿ ಚಿತ್ರಗಳು ಭಾರ್ಹೂಟ್ ಶಿಲ್ಪಗಳಿಗಿಂತಲೂ ವ್ಯಕ್ತಿಗಳನ್ನಾಗಲೀ ಘಟನೆಗಳನ್ನಾಗಲೀ ಪ್ರತಿನಿಧಿಸುವಲ್ಲಿ ತುಂಬಾ ಪ್ರಗತಿಯನ್ನು ಸಾಧಿಸಿವೆ. ಮಾನವ ಶರೀರದ ಭಾಗಗಳು ಮತ್ತು ಅವುಗಳ ಚಲನೆಯನ್ನು ಪ್ರದರ್ಶಿಸುವಲ್ಲಿ ಸಾಮರಸ್ಯವನ್ನು ಸಾಧಿಸಲಾಗಿದ್ದು ಇವು ತುಂಬಾ ಸಹಜವಾಗಿ. ಆದರೆ ಬೋಧಗಯಾದಲ್ಲಿಯ ಶಿಲ್ಪಗಳಲ್ಲಿ ಕಾಣುವ ಮೋಹಕತೆ ಇಲ್ಲೇಕೋ ಕಾಣಿಸುತ್ತಿಲ್ಲ. ಹಲವಾರು ಬಗೆಯ ಪ್ರಾಣಿಗಳು ಮತ್ತು ಪಕ್ಷಿಗಳು, ಮರಗಳು ಮತ್ತು ಹೂಗಳು ಸೊಗಸಾಗಿ ಮೂಡಿವೆ.

ದಕ್ಷಿಣದ ತೋರಣವು ಹೆಚ್ಚು ಹಳೆಯದು. ತೋರಣದ ಹಿಂಭಾಗದಲ್ಲಿ ಮಧ್ಯದ ಕಮಾನಿನ ಮೇಲೆ ಛದ್ದಾಂತ ಜಾತಕವನ್ನು ಬಳಸಿಕೊಳ್ಳಲಾಗಿದೆ. ಕೆಳಗಿನ ಕಮಾನಿನ ಮೇಲೆ ಕುಶಿನಗರದ ಮುತ್ತಿಗೆಯನ್ನು ವಿವರಿಸಲಾಗಿದೆ.

ಛದ್ದಾಂತ ಜಾತಕದ ಪ್ರಕಾರ, ಹಿಂದಿನ ಜನ್ಮಗಳೊಂದರಲ್ಲಿ ಬುದ್ಧನು ಆನೆಗಳ ಗುಂಪೊಂದರ ಅರಸನಾಗಿ ಆರು ಕೊಂಬುಗಳೊಂದಿಗೆ ಜನ್ಮತಾಳಿದನು. ಆತನಿಗೆ ಮಹಾ ಸುಭದ್ದ ಮತ್ತು ಚುಲ್ಲಸುಭದ್ದ ಎಂದು ಇಬ್ಬರು ಪತ್ನಿಯರಿದ್ದರು. ಚುಲ್ಲಸುಭದ್ದಳಿಗೆ ಇನ್ನೊಬ್ಬಳನ್ನು ಕಂಡರೆ ಆಗದು. ಅವಳ ಮೇಲೆ ಸೇಡು ತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದಳು. ಇದಕ್ಕಾಗಿ ಅವಳು ನಿರಾಹಾರ ದೀಕ್ಷೆ ತೆಗೆದುಕೊಂಡು ಸಾವನ್ನಪ್ಪಿ ವಾರಣಾಸಿಯ ರಾಣಿಯಾಗಿ ಪುನರ್ಜನ್ಮ ಹೊಂದಿದಳು. ನೆಪ ಮಾತ್ರಕ್ಕೆ ರೋಗಿ ಎಂದು ನಟಿಸುತ್ತಾ ತನ್ನ ರೋಗವು ಗಜರಾಜನ ಕೊಂಬಿನಿಂದ ಮಾತ್ರ ವಾಸಿಯಾಗುವುದೆಂದು ತನ್ನ ಪತಿರಾಜನಿಗೆ ತಿಳಿಸಿದಳು. ರಾಜನು ಕೂಡಲೇ ಸೋನುತ್ತರನೆಂಬ ಬೇಟೆಗಾರನನ್ನು ಕರೆಸಿ ರಾಣಿಯ ಇಚ್ಛೆಯನ್ನು ಹೇಳಿ ಆ ಗಜರಾಜನ ಕೊಂಬನ್ನು ತರಲು ಆಜ್ಞಾಪಿಸಿದನು. ಅವನು ಒಬ್ಬ ಭಿಕ್ಷುವಿನಂತೆ ನಟಿಸುತ್ತಾ ಆನೆಗಳ ಗುಂಪನ್ನು ಸೇರಿ ಮರೆಯಿಂದ ಗಜರಾಜನಿಗೆ ವಿಷಪೂರಿತ ಬಾಣವೊಂದನ್ನು ಬಿಟ್ಟನು. ಮರಣವನ್ನಪ್ಪುವಾಗಲೂ ಆನೆಗಳ ರಾಜನು ತನ್ನನ್ನು ಕೊಂದವನಿಗೆ ಯಾವ ಪ್ರತೀಕಾರವನ್ನೂ ಬಯಸದೆ, ಅವನು ಕೊಲ್ಲಲು ಬಂದ ಕಾರಣವನ್ನು ತಿಳಿದುಕೊಂಡು ತನ್ನ ಎಲ್ಲಾ ಕೊಂಬುಗಳನ್ನು ಸೋನುತ್ತರನಿಗೆ ಕಿತ್ತುಕೊಟ್ಟು ಇಹಲೋಕವನ್ನು ತ್ಯಜಿಸಿದನು. ವಾರಣಾಸಿಗೆ ಹಿಂದಿರುಗಿದ ಸೋನುತ್ತರನು ಗಜರಾಜನ ಕೊಂಬುಗಳನ್ನು ರಾಣಿಗೆ ತಲುಪಿಸಿದನು. ಹಿಂದಿನ ಜನ್ಮದಲ್ಲಿ ತನ್ನ ಪತಿಯಾಗಿದ್ದ ಗಜರಾಜನ ರಕ್ತಭರಿತ ಕೊಂಬುಗಳನ್ನು ಕಂಡು ದುಃಖವನ್ನು ತಡೆಯಲಾರದೆ ಎದೆಯೊಡೆದು ಮೃತಳಾದಳು. ಈ ಶಿಲ್ಪಾಕೃತಿಗಳಲ್ಲಿ ಆನೆಗಳಿಗೆ ಸಂಬಂಧಿಸಿದ ಘಟನೆಗಳನ್ನು ಮಾತ್ರ ಚಿತ್ರೀಕರಿಸಲಾಗಿದೆ. ಎಡಬದಿಯಲ್ಲಿ ಗಜರಾಜನು ಕಮಲ ಸರೋವರದಲ್ಲಿ ಸ್ನಾನ ಮಾಡುತ್ತಿರುವನು. ರಾಜಲಾಂಛನಗಳಾದ ಕೊಡೆ ಮತ್ತು ಚವುರಿಗಳ ಮಧ್ಯೆ ಇರುವ ಆರು ಕೊಂಬುಗಳುಳ್ಳ ಆನೆಯನ್ನು ನೋಡಿ ಇದುವೇ ಗಜರಾಜನೆಂದು ಸುಲಭವಾಗಿ ಗ್ರಹಿಸಬಹುದು. ಬಲಬದಿಯಲ್ಲಿ ಆರು ಕೊಂಬಿನ ಆನೆ ಎರಡು ಸಲ ಕಾಣಿಸುತ್ತದೆ. ಬೇಟೆಗಾರನು ಹೊಂಚು ಹಾಕುತ್ತಾ ಅಡಗಿಕೊಂಡಿರುವ ಸ್ಥಳದ ಕಡೆಗೆ ನಡೆಯುತ್ತಾ ಹೋಗುತ್ತಿರುವುದು ಮತ್ತು ಬೇಟೆಗಾರನು ತನ್ನ ಬಾಣವನ್ನು ಗುರಿ ಇಟ್ಟು ಬಿಲ್ಲನ್ನು ಎಳೆಯುವಾಗ ಒಂದು ಮೂಲೆಯಲ್ಲಿ ಕಾಣಿಸುವುದು. ಎಡಬದಿಯ ಮತ್ತು ಬಲ ಬದಿಯ ದೃಶ್ಯಗಳನ್ನು ಒಂದು ಮರವು ಬೇರ್ಪಡಿಸುತ್ತದೆ. ಸಂಪೂರ್ಣವಾಗಿ ಈ ದೃಶ್ಯಗಳು ಕಥೆಯನ್ನು ಹೇಳದಿದ್ದರೂ ಕಥೆಯು ಪ್ರಚಲಿತದಲ್ಲಿದ್ದುದರಿಂದ ಬುದ್ಧನು ಹಿಂದಿನ ಜನ್ಮಗಳಲ್ಲಿಯೂ ಎಂತಹ ಉದಾತ್ತವಾದಿ ಯಾಗಿದ್ದನೆಂಬುದನ್ನು ವಿವರಿಸುವುದೇ ಈ ದೃಶ್ಯಗಳ ಗುರಿ.

'ಕುಶಿನಗರದ ಮುತ್ತಿಗೆ' ಎಂಬ ಶಿಲ್ಪಾಕೃತಿಯಲ್ಲಿ ಶಿಲ್ಪ ಕಲಾವಿದರ ಜಾಣ್ಮೆಯನ್ನು ಗುರುತಿಸಬಹುದು. ಅರಣ್ಯ ದೃಶ್ಯಗಳನ್ನು ಕೆತ್ತನೆಯಿಂದ ಚಿತ್ರೀಕರಿಸಿದಷ್ಟೇ ಸುಲಭವಾಗಿ ಯುದ್ಧ ದೃಶ್ಯಗಳನ್ನು ಇಲ್ಲಿ ರೂಪಿಸಿದ್ದಾರೆ. ಬುದ್ಧನ ಅಂತ್ಯ ಸಂಸ್ಕಾರ ಮುಗಿದೊಡನೆ, ಕುಶಿನಗರದ ಮಲ್ಲರು ಎಲ್ಲಾ ಬೂದಿಯನ್ನು ತಾವೇ ಇಟ್ಟುಕೊಳ್ಳಲು ಬಯಸಿದನು. ಇವರ ಈ ವರ್ತನೆ ನೆರೆಯ ರಾಜರಿಗೆ ಸರಿ ಕಾಣಲಿಲ್ಲ. ಅವರೆಲ್ಲರೂ ಒಂದಾಗಿ ಕುಶಿನಗರಕ್ಕೆ ಮುತ್ತಿಗೆ ಹಾಕಿದರು. ಬಲಗಡೆಯ ಭಾಗದಲ್ಲಿ ಶತ್ರು ಸೈನ್ಯದ ಆಗಮನ, ಮಧ್ಯದಲ್ಲಿ ನಗರದ ಮುತ್ತಿಗೆ ಮತ್ತು ಎಡಗಡೆಯಲ್ಲಿ ವಿಜಯಿಗಳ ರಕ್ಷಣೆಯಲ್ಲಿದೆ. ಅಲ್ಲಲ್ಲಿ ಎತ್ತರ ಗೋಪುರಗಳು, ಕೋಟೆಯ ತೆನೆಗಳು, ಬಂದೂಕುಗಳನ್ನಿಟ್ಟು ಗುರಿ ನೋಡಲು ಬೇಕಾಗಿರುವ ಕಿಂಡಿಗಳು ಎಲ್ಲವನ್ನೂ ಚಿತ್ರಿಸಿ, ಭಾರತೀಯ ಹಳೆಯ ನಗರದ ಮಾದರಿಯನ್ನು ತೋರಿಸಲಾಗಿದೆ. ಸೈನ್ಯದಲ್ಲಿ ಗುರುತಿಸಲ್ಪಡುವ ನಾಲ್ಕು ವಿಭಾಗಗಳಾದ ರಥ, ಗಜ, ತುರಗ, ಪದಾದಿಗಳ ಸೈನ್ಯವನ್ನೂ ಸಹ ಸುಂದರವಾಗಿ ರೂಪಿಸಲಾಗಿದೆ.

ಉತ್ತರದ ತೋರಣದ ಮೇಲೆ ಮುಂಭಾಗ ಹಾಗೂ ಹಿಂಭಾಗಗಳ ಕಮಾನಿನ ಸುತ್ತಲೂ 'ವಿಶ್ವಂತರ ಜಾತಕ'ದಿಂದ ಆಯ್ದ ಕೆಲವು ದೃಶ್ಯಗಳಿಂದ ಅಲಂಕೃತಗೊಳಿಸಲಾಗಿದೆ. ಬೋಧಿಸತ್ವನು ರಾಜಕುಮಾರ ವಿಶ್ವಂತರನಾಗಿ ಜನಿಸಿದಾಗ ಸಿಬಿರಾಜ್ಯದಿಂದ ವಮಕ ಪರ್ವತಕ್ಕೆ ಗಡೀಪಾರು ಮಾಡಲ್ಪಟ್ಟನು. ಮಳೆಯನ್ನು ತರಿಸುವ ಶಕ್ತಿಯಿದ್ದ ಬಿಳಿ ಆನೆಯನ್ನು ಬರಗಾಲದಿಂದ ತತ್ತರಿಸುತ್ತಿದ್ದ ಕಳಿಂಗ ರಾಜ್ಯದ ಬ್ರಾಹ್ಮಣರಿಗೆ ದಾನ ಮಾಡಿದ್ದೇ ಬೋಧಿಸತ್ವನು ಮಾಡಿದ ಅಪರಾಧ. ತನ್ನ ಕುಟುಂಬದೊಂದಿಗೆ ವಿಶ್ವಂತರನು ರಾಜಧಾನಿ ಯನ್ನು ಬಿಟ್ಟು ಹೊರಟನು. ದಾರಿಯಲ್ಲಿ ಬ್ರಾಹ್ಮಣ ಭಿಕ್ಷುಕರಿಗೆ ತನ್ನ ರಥವನ್ನೂ, ಕುದುರೆಗಳನ್ನೂ ದಾನ ಮಾಡಿದನು. ವಮಕ ಪರ್ವತದ ತಳದಲ್ಲಿ ಒಂದು ಗುಡಿಸಲಿನಲ್ಲಿ ವಾಸಿಸುತ್ತಿದ್ದನು. ಜೂಜಕ ಎಂಬ ಬ್ರಾಹ್ಮಣನಿಗೆ ತನ್ನ ಮಕ್ಕಳನ್ನೂ ಕೊಟ್ಟುಬಿಟ್ಟನು. ಶಕ್ರ ಎಂಬ ದೇವತೆ ಪರೀಕ್ಷೆ ಮಾಡಲು ಬ್ರಾಹ್ಮಣ ವೇಷದಲ್ಲಿ ಬಂದಾಗ ತನ್ನ ಹೆಂಡತಿಯನ್ನೂ ಸಹ ಸಮರ್ಪಣೆ ಮಾಡಿದನು. ಈತನ ದಯಾಗುಣಕ್ಕೆ ಮೆಚ್ಚಿದ ದೇವತೆಯು ಬೋಧಿಸತ್ವನಿಗೆ ಆತನ ಹೆಂಡತಿಯನ್ನೂ, ರಾಜ್ಯವನ್ನೂ

ಹಿಂದಿರುಗಿ ಪಡೆಯುವಂತೆ ಕರುಣಿಸಿದನು. ಅರಸನು ವಿಶ್ವಂತರನ ಮಕ್ಕಳನ್ನು ಜೂಜಕನಿಂದ ಮರಳಿ ಪಡೆದನು. ಈ ಕಥೆಯು ತೋರಣದ ಮುಂಭಾಗದಲ್ಲಿ ಕಮಾನಿನ ಸುತ್ತಲೂ ಚಿತ್ರಗಳಿಂದ ಪ್ರಾರಂಭವಾಗುತ್ತದೆ. ರಾಜಕುಮಾರನು ಆನೆಯ ಮೇಲೆ ಕುಳಿತು ಅರಮನೆಯ ಪ್ರಾಂಗಣದಿಂದ ಹೊರಬರುತ್ತಾನೆ. ನಂತರ ತನ್ನ ಕುಟುಂಬದೊಂದಿಗೆ ರಥವನ್ನೇರಿ ಗಡಿಪಾರು ಆಜ್ಞೆಯನ್ನು ಪಾಲಿಸಲು ನಗರವನ್ನು ಬಿಡುತ್ತಾನೆ. ರಥವನ್ನೂ, ಕುದುರೆಗಳನ್ನೂ ದಾನ ಮಾಡುವುದನ್ನು ಕೆತ್ತಲಾಗಿದೆ. ಎಡಭಾಗದಲ್ಲಿ ತನ್ನ ಪತ್ನಿ ಮಾದ್ರಿ ಹಾಗೂ ಮಕ್ಕಳೊಂದಿಗೆ ನಡೆದು ಹೋಗುವುದನ್ನು ಚಿತ್ರಿಸಲಾಗಿದೆ. ಕಮಾನಿನ ಹಿಂಬದಿಯಲ್ಲೂ ಜಾತಕ ಕಥೆ ಮುಂದುವರೆಯುತ್ತದೆ. ಒಂದು ಆಶ್ರಮದಲ್ಲಿ ವಾಸಿಸುವುದು, ಅಡವಿಯನ್ನು ಪ್ರವೇಶಿಸುವುದು, ಜೂಜಕನಿಗೆ ತನ್ನ ಮಕ್ಕಳನ್ನು ಕೊಡುವುದು, ತನ್ನ ಹೆಂಡತಿಯನ್ನೂ ದಾನ ಮಾಡುವುದು ಮೊದಲಾದ ಚಿತ್ರಗಳನ್ನು ಬಿಡಿಸಲಾಗಿದೆ. ಕೊನೆಯ ಚಿತ್ರದಲ್ಲಿ ಪುನಃ ಎಲ್ಲರೂ ಸಂತೋಷವಾಗಿ ಒಂದುಗೂಡುವುದು ಮತ್ತು ರಾಜಧಾನಿಗೆ ಹಿಂದಿರುಗುವುದರೊಂದಿಗೆ ಕಥೆಯನ್ನು ಮುಕ್ತಾಯಗೊಳಿಸಲಾಗಿದೆ.

ಪೂರ್ವದಿಕ್ಕಿನ ತೋರಣವನ್ನು ಅಲಂಕರಿಸುವಲ್ಲಿ ಶಿಲ್ಪಿಗಳ ತಂತ್ರವನ್ನು ಮೆಚ್ಚಬೇಕಾಗಿದೆ. ಸಾಂಚಿಯ ಶಿಲ್ಪಗಳಲ್ಲಿಯೇ ಅತ್ಯಂತ ಸುಂದರವಾಗಿ ಇದನ್ನು ರೂಪಿಸಲಾಗಿದೆ. ಸ್ತೂಪದ ಹೊರಭಾಗದ ಮೇಲಿನ ಕಮಾನಿನಲ್ಲಿ ಬುದ್ಧನ ಹಿಂದಿನ ಅವತಾರಗಳನ್ನು ತೋರಿಸಲಾಗಿದೆ: ಮಧ್ಯದಲ್ಲಿ ಕಪಿಲವಸ್ತುವಿನಿಂದ ಮಹಾ ನಿರ್ಗಮನ ಮತ್ತು ಕೆಳಗಿನ ಕಮಾನಿನಲ್ಲಿ ಬೋಧಿವೃಕ್ಷದ ದರ್ಶನಕ್ಕೆ ಅಶೋಕನು ಭೇಟಿ ನೀಡಿದ ಘಟನೆಗಳನ್ನು ಚಿತ್ರಿಸಲಾಗಿದೆ. ಉಳಿದ ಭಾಗವನ್ನು ಸಿಂಹಗಳು, ಆನೆಗಳು ಮತ್ತು ನವಿಲುಗಳನ್ನು ತುಂಬಾ ಸೊಗಸಾಗಿ ಕೆತ್ತಲಾಗಿದೆ.

ತೋರಣದ ಎಡಸ್ತಂಭದ ಮುಂಭಾಗದ ಮೇಲೆ ಬೋಧಿವೃಕ್ಷ, ನದಿಯ ಮೇಲೆ ಬುದ್ಧನು ನಡೆಯುತ್ತಿರುವುದು ಮತ್ತು ರಾಜ ಮೆರವಣಿಗೆಯೊಂದು ಹೋಗುತ್ತಿರುವ ಚಿತ್ರಗಳನ್ನು ನಾವು ಕಾಣುತ್ತೇವೆ. ಬಲಸ್ತಂಭದ ಮುಂಭಾಗದಲ್ಲಿ ಬ್ರಹ್ಮ ಸ್ವರ್ಗಲೋಕ ಮತ್ತು ಮೂವತ್ತುಮೂರು ದೇವರುಗಳನ್ನು ಚಿತ್ರಿಸಲಾಗಿದೆ.

ಕಪಿಲವಸ್ತುವಿನಿಂದ ಮಹಾನಿರ್ಗಮನ ಚಿತ್ರದಲ್ಲಿ ಎಡಗಡೆಗೆ ಸುತ್ತಲೂ ದೊಡ್ಡಗೋಡೆಗಳಿಂದ ರಕ್ಷಿಸಲ್ಪಟ್ಟಿರುವ ನಗರ ಹಾಗೂ ಪ್ರೇಕ್ಷಕ ಜನರು ಮೊಗಸಾಲೆಗಳಲ್ಲಿ ನಿಂತು ವೀಕ್ಷಿಸುತ್ತಿರುವುದನ್ನು ಕಾಣುತ್ತೇವೆ. ಮಹಾದ್ವಾರವಾಗಿ ತೋರಣದ ಒಂದು ಅಡ್ಡಪಟ್ಟಿ ಚಿತ್ರಿತವಾಗಿದೆ. ರಾಜಕುಮಾರನ ಕುದುರೆ 'ಕಂಠಕ'ವನ್ನು ೫ ಸಲ ಚಿತ್ರೀಕರಿಸಲಾಗಿದೆ, ಅದರ ವೇಗದ ಮುಂದುವರಿಕೆಯನ್ನು ತಿಳಿಸುವುದಕ್ಕಾಗಿ. ಆದರೆ ಕುದುರೆಯ ಮೇಲೆ ಸವಾರನನ್ನು ಕಾಣೆವು. ಆತನ ವಿಶ್ವಾಸಿ ಸೇವಕ 'ಚಂದಕ'ನು ಮಾತ್ರ ಕೊಡೆಯನ್ನು ಹಿಡಿದಿರುವನು. ಇದು ಬುದ್ಧನ ಇರುವಿಕೆಯನ್ನು ತೋರಿಸುತ್ತದೆ. ಆಶ್ರಮದ ಬಲಗಡೆ ಎರಡು ಹೆಜ್ಜೆ ಗುರುತುಗಳು ಹಾಗೂ ಅವುಗಳ ನಡುವೆ ಧರ್ಮಚಕ್ರದ ಚಿತ್ರವನ್ನು ಬಿಡಿಸಲಾಗಿದೆ. ಈ ಹೆಜ್ಜೆ ಗುರ್ತುಗಳು ಆತನು ಕುದುರೆಯಿಂದ ಇಳಿದಿರುವನೆಂದು ತೋರಿಸುತ್ತದೆ. ಹೆಜ್ಜೆ ಗುರ್ತುಗಳ ಮೇಲೆ ಚಂದಕನು ಹಿಡಿದಿರುವ ಕೊಡೆ ಕಾಣಿಸುತ್ತದೆ. ಚಂದಕನು ಮೊಣಕಾಲೂರಿದ್ದಾನೆ. ನಂತರ ಕುದುರೆ ಸವಾರನಿಲ್ಲದೆ ಹಿಂತಿರುಗಿದೆ. ಛತ್ರಿ ಕಾಣುವುದಿಲ್ಲ. ಈ ತೋರಣ ಹಾಗೂ ಪಶ್ಚಿಮ ತೋರಣಗಳಲ್ಲಿಯ ಶಿಲ್ಪಿಗಳ ಕೆತ್ತನೆ ಇತರ ತೋರಣಗಳಲ್ಲಿಯ ಕೆಲಸಕ್ಕಿಂತಲೂ ನಯ, ನಾಜೂಕುಗಳಿಂದ ಕೂಡಿದೆ. ಶಿಲ್ಪಿಗಳ ಕಾರ್ಯ ಚಾತುರ್ಯವನ್ನು ಸಾರಿ ಹೇಳುತ್ತವೆ. ಇವರು ಹತ್ತಿರದ ಪಟ್ಟಣವಾದ ಭಿಲ್ಸಾದಿಂದ ಕರೆಯಲ್ಪಟ್ಟ ದಂತ ಶಿಲ್ಪಿಗಳೆಂದು ಊಹಿಸಲಾಗಿದೆ.

ಭಾರ್ಹೂಟ್‌ನಲ್ಲಿಯ ಕೆತ್ತನೆಗಳ ಹಾಗೆ ಇಲ್ಲಿ ಶಿಲ್ಪಗಳು ಒರಟಾಗಿಲ್ಲ. ಹೆಚ್ಚು ಉಬ್ಬು ಹೊಂದಿವೆ. ಆದರೆ ಚಿತ್ರಗಳು ತುಂಬಾ ಗುಂಪು ಗುಂಪಾಗಿ ಒತ್ತಾಗಿ ಕಾಣುತ್ತವೆ. ಒಂದು ಸಾಲಿನ ಚಿತ್ರಗಳ ನೆರಳು ಮತ್ತೊಂದು ಸಾಲಿನ ಚಿತ್ರಗಳ ಮೇಲೆ ಬೀಳುತ್ತದೆ. ಸೂರ್ಯನ ಬೆಳಕು ಬಿದ್ದಾಗ ಉಬ್ಬಾದ ಚಿತ್ರಗಳು ತುಂಬಾ ಸೊಗಸಾಗಿ ಕಾಣುತ್ತವೆ. ಈ ಪೂರ್ವದ ತೋರಣದಲ್ಲಿ ಉಳಿದಿರುವ ಚಿತ್ರವಾದ ಯಕ್ಷಿಣಿಯ ಬಗ್ಗೆ ಒಂದು ಮಾತು ಹೇಳಲೇ ಬೇಕಾಗುತ್ತದೆ. ಈ ತೋರಣದ ಉತ್ತರ ಕಂಬವನ್ನು ಅಡ್ಡವಾಗಿ ಸೇರುವ ಕಮಾನನ್ನು ಸುಂದರಗೊಳಿಸುತ್ತದೆ. ಈ ಯಕ್ಷಿಣಿಯ ಶಿಲ್ಪ ಕಾವ್ಯ, ಮೂಲತಃ ಎರಡೂ ಕಡೆಯಲ್ಲಿ ಈ ಯಕ್ಷಿಣಿಯರು ಇದ್ದಿರಬೇಕು. ಆದರೆ ಈಗ ಉಳಿದಿರುವುದು ಉತ್ತರ ಕಂಬಕ್ಕೆ ಅಂಟಿಕೊಂಡಿರುವುದು ಮಾತ್ರ. ಹಿಂದೆ ನಾವು ನೋಡಿದ ಚುಲಕೋಕ ದೇವತೆಯ ಶಿಲ್ಪಕ್ಕೆ ಹೋಲಿಸಿದಲ್ಲಿ ಈ ಯಕ್ಷಿಣಿಯ ಶಿಲ್ಪ ರಚನೆಯಲ್ಲಿ ಹೆಚ್ಚು ಪ್ರೌಢಿಮೆಯನ್ನು ಕಾಣುತ್ತೇವೆ. ಮುಂದೆ ಬಾಗಿರುವ ಮೈ ಮತ್ತು ಕೈಕಾಲುಗಳ ರಚನೆ ಸುಂದರ ಮಾತ್ರ ಶಿಲ್ಪಕೃತಿಯಾದ ಈ ತೋರಣಕ್ಕೆ ಅತ್ಯಂತ ಸಮರಸವಾಗಿ ಹೊಂದಿದೆ. ಇಲ್ಲಿ ಯಕ್ಷಿಣಿಯು ತನ್ನ ಹಿಂದಿನಿಂದ ಬಂದಿರುವ ಮಾವಿನ ಮರವನ್ನು ಹಿಡಿದಿದ್ದಾಳೆ. ಆಕೆಯ ಕಾಲುಗಳು ಕೆಳಗೆ ಮರದ ಬುಡವನ್ನು ಒತ್ತಿ ಆಶ್ರಯಿಸಿವೆ. ಈಕೆಯ ಸ್ಪರ್ಶದಿಂದಾಗಿ ಹೂ ಮತ್ತು ಹಣ್ಣು ಬಿಡುವ ಫಲವತ್ತಾದ ಮರವಾಗಿದೆ ಎಂಬ ಸಂಕೇತವನ್ನು ಸೂಚಿಸುತ್ತದೆ. ಆಕೆಯ ಮೈ ರಚನೆ ತುಂಬಾ ಮೃದುವಾಗಿದ್ದು ಚಲನೆಯಿಂದ ಕೂಡಿದೆ. ನಯವಾದ ಕೆತ್ತನೆಯ ಶರೀರದ ವಕ್ರರೇಖೆಗಳು ರಕ್ತಮಾಂಸಗಳಿಂದ ಕೂಡಿದ ಜೀವಂತ ಹೆಣ್ಣೇನೋ ಎಂದು ಭ್ರಮಿಸುವಂತೆ ಮಾಡುತ್ತದೆ ಆಕೆಯ ಮುಂದು ಸ್ತನಗಳು,ನಡುವಿಗೆ ಹಾಕಿಕೊಂಡಿರುವ ಬಿಗಿದಾದ ಪಟ್ಟಿ, ಕೊಳವೆಯಾಕಾರದ ಕೈಕಾಲುಗಳು - ಇವುಗಳ ನಡುವಿನ ಪರಸ್ಪರ ವ್ಯತ್ಯಾಸಗಳು ಶಿಲ್ಪದ ಸೌಂದರ್ಯವನ್ನು ಇನ್ನೂ ಹೆಚ್ಚಿಸುತ್ತವೆ. ಚಿತ್ರದ ಸೊಗಸನ್ನು ಮರದ ರೇಖಾವರ್ಣನೆಯು ಮತ್ತಷ್ಟು ವೃದ್ಧಿಗೊಳಿಸುತ್ತದೆ. ಯಥಾರ್ಥವಾಗಿ ರೂಪಿಸಲ್ಪಟ್ಟ ಸಾಂಚೀಯ ಈ ಶೃಂಗಾರದ ಯಕ್ಷಿಣಿಯ ಚಿತ್ರ ಭಾರತೀಯಕಲೆಯ ಐಹಿಕ ಮತ್ತು ಪಾರಮಾರ್ಥಿಕ ತತ್ವಗಳ ಸಮ್ಮಿಶ್ರಣವನ್ನು ಚಿತ್ರೀಕರಿಸಿದಂತಿದೆ.

ಸಾಂಚೀ ಸ್ತೂಪದ ಪಶ್ಚಿಮದ ತೋರಣವೇ ಕೊನೆಯದು. ಕೆಳಗಿನ ಕಮಾನಿನ ಹೊರ ಮೇಲ್ಮೈಯಲ್ಲಿ ಬೌದ್ಧಾಂತ ಜಾತಕ ಕಾಣುತ್ತದೆ. ಇಲ್ಲಿ ಕಾಡು ಜೀವನಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡಲಾಗಿದೆ. ಮರದ ಸುತ್ತಲೂ ಆನೆಗಳ ಗುಂಪು ಸೇರಿದೆ. ಸಂಪೂರ್ಣ ಬಲಗಡೆಗೆ ನಿಂತಿರುವ ಬೇಟೆಗಾರನು ಕಥೆಗೆ ಸುಳಿವು ಕೊಡುವಂತಿದೆ. ಆನೆಗಳು ತುಂಬಾ ಸಹಜವಾಗಿ ಕಾಣಿಸುತ್ತವೆ. ಸಾಂಚಿಯ ಶಿಲ್ಪ ಕಲಾವಿದರು ಪ್ರಾಣಿಗಳ ಚಿತ್ರಗಳನ್ನು ಕಡೆಯುವುದರಲ್ಲಿ ತಮ್ಮ ಪ್ರಾವೀಣ್ಯತೆಯನ್ನು ತೋರಿದ್ದಾರೆ.

ದಕ್ಷಿಣದ ಮಹಾದ್ವಾರದಲ್ಲಿ ಶರೀರಗಳನ್ನು ಸಪಾಟಾಗಿ ಚಿತ್ರಿಸಲಾಗಿದ್ದು, ಪಶ್ಚಿಮದ ತೋರಣದಲ್ಲಿ ಎದ್ದು ಕಾಣುವಂತೆ ಕೆತ್ತಲಾಗಿದೆ. ಬೌದ್ಧಾಂತ ಜಾತಕ ಕಥೆಗಳು ಮನಸ್ಸಿಗೆ ಹಿತವಾಗಿ ಚಿತ್ರಿತವಾಗಿದೆ. ದೊಡ್ಡ ಪ್ರಾಣಿಗಳು ಮತ್ತು ಚಿಕ್ಕಮರಗಳು ಕಥಾ ಸನ್ನಿವೇಶಗಳಿಗೆ ತಕ್ಕಂತೆ ಅವುಗಳ ಪ್ರಾಧಾನ್ಯತೆಗನುಗುಣವಾಗಿ ಪ್ರದರ್ಶಿಸಲಪಟ್ಟಿವೆ. ಬೇಟೆಗಾರನ ಚಿತ್ರವಿರದಿದ್ದಲ್ಲಿ, ಬೋಧಿವೃಕ್ಷದ ಪೂಜೆ ಏನೋ ಎಂದು ಅನ್ನಿಸುತ್ತಿತ್ತು. ಅಲಂಕಾರಕ್ಕಿಂತ ವಿವರಣೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

(ಮುಂದುವರಿಯುವುದು)

*Interview*


# S. G. VASUDEV

In February there was an exhibition of the copper reliefs done by S.G. Vasudev. This exhibition was slightly different from the usual in the sense that it was more in the nature of a retrospective as it covered his works over the past 25 years. It was a week long show that was well attended. Relief work in copper sheets is a very old craft. Traditionally it has been used in the temples to cover the stone deity or the carvings on the pillars and doors. Largely this art form has stayed confined to such traditional usage. In the hands of S.G.Vasudev the copper sheets magically come alive with poetic images. He has used this traditional craft to depict different themes and built intricate textures into them. He dextrously uses the richness of the metal, with meticulous detailing of the work to create compositions that are full of life & fluildity. In fact, he treats the metal no differently from his canvas.

The themes and his distinctive style run concurrently in both the media, with the result the copper plates remind you of his paintings.

Taking this opportunity, we spoke to Vasudev. Here are the excerpts.

Nesaru: The large space here really heightens the impact of these large pieces. It must be a really strenous work, taking a lot of tine and effort. How do you manage?



*Tree of life*

Vasudev :Yes. It is hard work and time consuming. I have two craft men helping me and we work as a team.

Nesaru: Could you outline how it is done. Is it the same technique used by the craftsmen who do metal work in covering temple figures?

Vasudev : Yes this is the same traditional techique. Only the traditional technique remained confined to such temple work where as I have used it for my themes. Also the thickness of the sheet they use is much lower where as I use 18 gauge sheets which are much thicker this allows for more detailed work done.

Brick powder, gum and oil are boiled together and poured into a tray like frame. The sheet of metal is kept on this like hot mixture and allowed to cool. The mixture into a soft mass. Now the sheet metal can be worked upon. You beat it to create the desired relief. This part of the work is being done from the reverse side of the sheet and to give it the final finish and texture you have to remove the sheet using a blow torch to heat it up, and keep it with the front side up. Now the finishing touches in terms of details and texture could be worked.


Nesaru: Do you do any thing to prevent the sheet from tarnishing.

Vasudev: Yes. After the work is completed we give it a coat of lacquer, which keeps the shine and prevents tarnishing.

**M.A.N. Prasad**



*Elephant and Rider*



## *S.G. Vasudev*

| | |
|---|---|
| Born | 3rd March 1941, Mysore, Karnataka |
| Education | Diploma in Fine Arts, Govt. College of Arts & Crafts, Chennai (1968) |

**SELECTED SOLO SHOWS**

| | | |
|---|---|---|
| Mumbai | 1967 | Jehangir Art Gallery |
| | 1969 | Camlin Art Gallery |
| | 1971 | Pundole Art Gallery |
| | 1974 | Pundole Art Gallery |
| | 1990 | Jehangir Art Gallery |
| | 1992 | Pundole Art Gallery |
| | 1993 | Sakshi Gallery |
| | | Jehangir Art Gallery |
| | 1996 | Sakshi Gallery |
| | | Jehangir Art Gallery |
| | 1999 | Sakshi Gallery |
| | | Jehangir Art Gallery |
| | 2002 | Sakshi Gallery |

**SELECTED GROUP EXHIBITIONS**

Contemporary Miniatures, Progressive Painters

Association, Chennai & Mumbai (1972)

Exhibition of Cholamandal Artists' Works,

Goethe Institute, Pune (1973)

Harmony, Nehru Centre, Mumbai (1996)

Exhibition-Auction, Helpage India, Mumbai (1987,91)

Exhibition-Auction, Save the Children, Mumbai (1995)

Anniversary Exhibition, Gallery 88, Kolkata (1995)

Anniversary Exhibition, Gallery Ganesh, New Delhi (1993)

Anniversary Exhibition, Cymroza Art Gallery, Mumbai (1996)

Anniversary Exhibition, Surya Gallery, Hyderabad (1996)

Anniversary Exhibition, Art Indus Gallery, New Delhi (2001)

Inaugural Exhibition, Primary Colours, Mumbai (2001)

Inaugural Exhibition, Chemera Art Centre, Mumbai (2001)

Inaugural Exhibition, Art Pilgrim, Gurgaon (2002)

Inaugural Exhibition, Forum Art Gallery, Chennai (2002)

'Harmony', a group exhibition, Mumbai (1999, 2000)

'Distilled Perceptions', a group exhibition organised by Birla Academy of Art & Culture, Mumbai (2000)

'Of Bulls & Horses', a group exhibition organised by Birla Academy of Art & Culture, Mumbai (2002)

'Metaphorical Dialogues', a group exhibition organised by Apparao Galleries, Chennai (2001)

New Delhi (2002)

'Eye of the South', a group exhibition organised by Art in Crafts at Cymroza Art Gallery, Mumbai (2002)

'Southern Sojourn', a group exhibition organised by Anant Art Gallery, New Delhi (2002)

Many more shows held at Bangalore, Chennai, Hyderabad, New Delhi and Overseas.

**AWARDS**

Government of India Cultural Scholarship for painting (1964-66)

National Award, Lalit Kala Academi, New Delhi (1967)

State Award, Karnataka Lalit Kala Academi, Bangalore (1988)

Karnataka Lalit Kala Academi (1965, 79)

Tamil Nadu Lalit Kala Academi (1965, 77, 79)

Karnataka Rajyotsava Award (1994)

**ART CAMPS**

Karnataka Chitrakala Parishath, Bangalore (1972, 96)

Karnataka Lalit Kala Academi, Bangalore (1979)

Kerala Lalit Kala Academi, Thiruvananthapuram (1990), Munnar (2000)

The Arts Trust at the Oberai Hotel, Mumbai (1998)

Art World at The Taj Palace, New Delhi (1999)

Sanskriti Art Gallery at The Taj Bengal, Kolkata (2000)

Art World at The Taj Hotel, Chennai (2001)

Artists Entente organised by Intex Gallery, Dubai (2001)

**COLLECTIONS**

MUSEUMS/GALLERIES

National Gallery of Modern Art, New Delhi

Pundole Art Gallery, Mumbai

Gallery Chemould, Mumbai

Sakshi Gallery, Mumbai & Bangalore

Karnataka Lalit Kala Academi, Bangalore

Venkatappa Art Gallery, Bangalore

Tamil Nadu Lalit Kala Academi, Chennai

National Art Gallery, Chennai

**INSTITUTIONS/COMPANIES**

Bhabha Atomic Research Center, Mumbai

Air India, Mumbai

Wipro, Mumbai & Bangalore

Copper Chimney Restaurant, Mumbai

Citibank, New Delhi

Britannia Industries Ltd., Bangalore

**ART DIRECTION**

For national award-winning Kannada films: "Samskara" and "Vamsha Vriksha"

**OTHER DETAILS**

Founder member, Cholamandal Artists' Village, Chennai (1995)

Member, Executive Committee, Lalit Kala Academi, New Delhi (1981-83)

Member, Executive Committee, Karnataka State Lalit Kala Academi, Bangalore (1979-83)

Member, Advisory Committee, National Gallery of Modern Art, New Delhi, 2001

*-- M.A.N. Prasad*

# ಶ್ರೀ ಜಯಚಾಮರಾಜೇಂದ್ರ ಒಡೆಯರ ರಚನೆಗಳು

ಡಾ. ಸುಕನ್ಯಾ ಪ್ರಭಾಕರ್

''ಶ್ರೀ ಮಹಾಗಣಪತಿಂ ಭಜೇಹಂ'' (ಅಠಾಣ), ''ಚಿಂತಯಾಮಿ ಜಗದಂಬಾ''(ಹಿಂದೋಳ), ''ಶಿವ ಶಿವ ಶಿವ ಭೋ (ನಾದನಾಮಕ್ರಿಯ), ''ಬ್ರಹ್ಮಾಂಡವಲಯೇ '' (ಮಾಂಡ) ಇವೇ ಮುಂತಾದ ರಚನೆಗಳನ್ನು ಕೇಳಿ ಆನಂದಿಸದವರೇ ಇಲ್ಲ. ಅಂತೆಯೇ - ''ಪರಿಪಾಹಿಮಾಂ'' (ವಕುಳಾ ಭರಣ) ಗಂಗಣಪತೇ (ನಾಗಸ್ವರಾವಳಿ) ಲಂಬೋದರಪಾಹಿಮಾಂ (ನಾರಾಯಣಗೌಳ) ಬಾಲಕೃಷ್ಣಂ (ನೀಲವೇಣಿ) ಗಂಗಣಪತೇ (ದೂರ್ವಾಂಕಿ) ಹೀಗೆ ಒಂದೇ, ಎರಡೇ, ಕೇಳದಿರುವುದೇ ಹೆಚ್ಚು. ಕೆಲವೊಮ್ಮೆ ನಾನಾ ಕಾರಣಗಳಿಂದಾಗಿ, ವ್ಯಕ್ತಿ ಎಷ್ಟೇ ಪ್ರಸಿದ್ಧನಿದ್ದರೂ, ಅವರ ಕೃತಿಗಳು ಅಜ್ಞಾತವಾಗಿ, ಅಥವಾ ಬೇರೊಬ್ಬರ ಹೆಸರಿನ ಹಣೆಪಟ್ಟಿ ಹಚ್ಚಿಕೊಂಡು ನಿಲ್ಲುವ ದುಃಖಕರ ಸಂಗತಿಗಳೂ ಉಂಟು. ಇದು ಆತನಿಗೂ ಆತನ ರಚನೆಗಳಿಗೂ ಒದಗುವ ಅಭಿಶಾಪ. ಅಂತಹಶಾಪಗ್ರಸ್ತರಾದವರಲ್ಲಿ ಒಬ್ಬರು - ನಮ್ಮ ನೆಲದವರೇ ಆದ, ಯದುವಂಶದ ಕೊನೆಯ ಅರಸರಾದ 'ಶ್ರೀ ಜಯಚಾಮರಾಜೇಂದ್ರ ಒಡೆಯರು''

ಕನ್ನಡ ನಾಡಿನ ಸಾಂಸ್ಕೃತಿಕ ಸಂಪತ್ತಿಗೆ ಮೈಸೂರು ಅರಸರಕೊಡುಗೆ ಅಪಾರ. ಅನುಪಮ ಅತಿಶಯ. ವಿದ್ವಾಂಸರಿಗೂ, ಕಲಾವಿದರಿಗೂ ಆಶ್ರಯ ನೀಡಿ ಕಲಾಪೋಷಿತರಾದುದು ಮಾತ್ರವಲ್ಲ, ತಾವೇ ಸ್ವತಃ ಕಲಾವಿದರೂ ವಾಗ್ಗೇಕಾರರೂ ಆಗಿರುವುದು ಹೆಮ್ಮೆಯ ವಿಷಯ.

ತಮ್ಮ ಪೂರ್ವೀಕರ ಸಂಸ್ಕಾರ, ಕಲೆಗಳಲ್ಲಿನ ಸರಿಸಮಜ್ಞಾನ, ಮೈಸೂರುನ್ನಾಳಿದ ಕೊನೆಯ ಅರಸರಾದ ಶ್ರೀ ಜಯಚಾಮರಾಜೇಂದ್ರ ಒಡೆಯರಲ್ಲಿ ಮಡುಗಟ್ಟಿ ನಿಂತದ್ದು, ನಮ್ಮ ಕನ್ನಡಿಗರ ಪುಣ್ಯ.

ಪಾಶ್ಚಿಮಾತ್ಯ ಸಂಗೀತದೆಡೆಗೆ ಮೊದಲ ಅಭ್ಯಾಸ. ಪಿಯೋನೋವಾದನದಲ್ಲಿ ಪ್ರೌಢಿಮೆ ನಂತರ, ಅಂತರಾಳದಲ್ಲೇ ಹುದುಗಿದ್ದ ಭಾರತೀಯ ಸಂಗೀತದೆಡೆ ಗಮನ, ನಿರಂತರ ಕೇಳ್ಮೆ, ಸತತ ಅಧ್ಯಯನ, ಸಂಸ್ಕೃತ ಭಾಷೆಯಲ್ಲಿನ ಪಾಂಡಿತ್ಯ, ಶ್ರೀ ವೆಂಕಟಗಿರಿ ಯಪ್ಪನವರು, ಶ್ರೀ ವಾಸುದೇವಾಚಾರ್ಯ ರಂತಹ ಅಚಾರ್ಯರ ಮಾರ್ಗದರ್ಶನ ಜಯಚಾಮರಾಜೇಂದ್ರ ಒಡೆಯರನ್ನು ಶ್ರೇಷ್ಠ ವಾಗ್ಗೇಯಕಾರರಾಗಿಸಿದ್ದು, ಕರ್ನಾಟಕ ಸಂಗೀತ ಪುಣ್ಯ

ರಚಿಸಿದುದು 94 ಕೃತಿಗಳೇ ಆದರೂ, ಒಂದೊಂದೂ ಒಂದು ಆಣಿಮುತ್ತಿನಂತಿವೆ. ಈ 94 ರಚನೆಗಳನ್ನು ಸಾಹಿತ್ಯ ಹಾಗೂ ಸಂಗೀತ ದೃಷ್ಟಿಯಿಂದ ಹಲವು ಕೋನಗಳಿಂದ ನೋಡಿ, ಒಂದು ವಿಹಂಗಮ ನೋಟವನ್ನು ಬೀರುವ ಪ್ರಯತ್ನವೇ ಈ ಲೇಖನ.

ಒಬ್ಬ ವಾಗ್ಗೇಯಕಾರ ರಚಿಸಿದ ಎಲ್ಲವೂ ಚೆಂದವೇ ಆಗಿರುತ್ತದೆ ಎನ್ನುವ ಅಭಿಮಾನ ಇಲ್ಲಿಯ ದೃಷ್ಟಿಯಲ್ಲ. ಇರುವಷ್ಟರಲ್ಲಿಯೇ ನನ್ನ ಕಣ್ಣಿಗೆ ಕಂಡಿರುವ ವೈವಿಧ್ಯ ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನವಷ್ಟೇ ನನ್ನದು.

ಒಂದು ವಾಗ್ಗೇಯಕಾರ ರಚಿಸಿದ ಎಲ್ಲವೂ ಚೆಂದವೇ ಆಗಿರುತ್ತದೆ ಎನ್ನುವ ಅಭಿಮಾನ ಇಲ್ಲಿಯ ದೃಷ್ಟಿಯಲ್ಲ. ಇರುವಷ್ಟರಲ್ಲಿಯೇ ನನ್ನ ಕಣ್ಣಿಗೆ ಕಂಡಿರುವ ವೈವಿಧ್ಯ, ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನವಷ್ಟೇ ನನ್ನದು.

ಒಂದು 'ವಾಗ್ಗೇಯ ರಚನೆ' ಎಂದಾಗ, ಅದರಲ್ಲಿ ಬಳಸಲಾಗಿರುವ ವಾಕ್ ಅಥವಾ ಮಾತು ಅಥವಾ ಸಾಹಿತ್ಯ ಒಂದು ಭಾಗವಾದರೆ, ಮತ್ತೊಂದು ಮುಖದಲ್ಲಿ ಗೇಯ ಅಥವಾ ಧಾತು ಅಥವಾ ಸಂಗೀತ ಕಾಣಬರುತ್ತದೆ. ಒಂದು ರಚನೆಯಲ್ಲಿ ಇವೆರಡರ ಪಾತ್ರವನ್ನು ಗುರುತಿಸಿದಾಗ ಮಾತ್ರವೇ, ಆ ವಾಗ್ಗೇಯಕಾರನಿಗೆ ನಾವು ಸಲ್ಲಿಸುವ ನಿಜವಾದ ನಮನವಾಗುತ್ತದೆ



ಜನವರಿ 4 ಮತ್ತು 5ರಂದು ಮುಂಬೈಯಲ್ಲಿ ಮೈಸೂರು ಅಸೋಸಿಯೇಷನ್ ಹಾಗೂ ಕರ್ನಾಟಕ ಗಾನಕಲಾ ಪರಿಷತ್ ಸೇರಿ ನಡೆಸಿದ ಯುವ ಸಂಗೀತ ಸಮ್ಮೇಳನದಲ್ಲಿ ನಡೆದ ಪ್ರಾತ್ಯಕ್ಷಿಕೆ ಯಲ್ಲಿ ಡಾ. ಸುಕನ್ಯಾ ಪ್ರಭಾಕರ್ ಅವರು ಮಂಡಿಸಿದ ಲೇಖನ

ಕೃತಿಯೊಂದರ ಸಾಹಿತ್ಯದ ಯಾವ ಭಾಗದಲ್ಲಿ ಅರ್ಥಾತ್, ಭಾಷೆ, ವಸ್ತು, ಛಂದಸ್ಸು ಇವುಗಳ ದೃಷ್ಟಿಯಿಂದ, ಮತ್ತೊಂದು ಮುಖದಲ್ಲಿ ಸಂಗೀತದಲ್ಲಿ ಬಳಸಲಾದ ರಾಗ, ತಾಳಗಳ ಬಗೆಗೆ ವಿಶೇಷ ಗಮನ ನೀಡಿದಾಗ ಮಾತ್ರವೇ ಆ ರಚನೆಯ ರಚನಕಾರರ ವಿಶೇಷತೆಯ ಅರಿವಾಗುತ್ತದೆ.

ಒಡೆಯರು 94 ಕೃತಿಗಳಿಗೂ ಬಳಸಿರುವ ಭಾಷೆ - ಸಂಸ್ಕೃತ, ಇದಕ್ಕೆ ಕಾರಣ, ಸಂಸ್ಕೃತ ಭಾಷೆಯಲ್ಲಿ ಅವರಿಗಿದ್ದ ಒಲವು, ನಿರಂತರ ಅಧ್ಯಯನ ಜೊತೆಗೆ, ಮಹಾವಿದ್ವಾಂಸರಾದ, ಪ್ರೊ. ಎಸ್. ರಾಮಚಂದ್ರ ರಾಯರು, ಪ್ರೊ. ಯಾಮುನಾಚಾರ್ಯ, ಚಂದ್ರಶೇಖರ ಪಾಟಣಕರ್ ಮುಂತಾದವರ ಸಮರ್ಥ ಮಾರ್ಗದರ್ಶನ. ವೇದ, ಉಪನಿಷತ್ತು, ಮಹಾಕಾವ್ಯಗಳು, ಸಂಗೀತ ಶಾಸ್ತ್ರ ಗ್ರಂಥಗಳ ಬಗೆಗೆ ಅವರಿಗಿದ್ದ ಅಧಿಕಾರಯುತ ಜ್ಞಾನ ಅಚ್ಚರಿ ಮೂಡಿಸುವಂಥದ್ದು, ಕೇವಲ ಅದರ ಬಗೆಗೇ ನೂರಾರು ಪುಟಗಳನ್ನು ವಿವರಗಳನ್ನು ನೀಡಬಹುದು. ಅಂತಹ ಸರಕು ಒಡೆಯರಲ್ಲಿತ್ತು. ಹಾಗಾಗಿ ಕೃತಿ ರಚನೆಯ ಮಾಧ್ಯಮವಾಗಿ ಆಯ್ದುದು ಸಂಸ್ಕೃತ ಭಾಷೆ. ರಾಜ ಭಾಷೆ, ದೇವಭಾಷೆ ಸಂಸ್ಕೃತ ಅವರಿಗೆ ಒದಗಿ ಬಂದಿತು. ಒಲಿದು ಬಂದಿತು.

ಒಡೆಯರು ತಮ್ಮ ರಚನೆಗಳಲ್ಲಿ ಬಳಸಿದ ವಸ್ತುವಿನ ಬಗೆಗೆ ಗಮನ ಹರಿಸಿದರೆ, ಸಹಜವಾಗಿ, ಅನೂಚಾನವಾಗಿ ಬಂದ ಸಂಗೀತ ಕಾಣಬರುವಂಥದ್ದು ದೇವ, ದೇವಿಯರ ವರ್ಣನೆ, ಗುಣ ವಿಶೇಷಗಳು, ಮಿಗಿಲಾಗಿ - ಪ್ರಾರ್ಥನೆ, ಶರಣಾಗತ - ಇದೇ ಭಾವಗಳು ದಟ್ಟವಾಗಿ ಹರಡಿರುವಂಥದ್ದು. ಒಡೆಯರ ಕೃತಿಗಳಲ್ಲೂ ಈ ಅಂಶಗಳು ಸಹಜವಾಗಿ ಬಂದಿರುವುದಾದರೂ, ಅದರೊಂದಿಗೇ ಬಳಸಿರುವ ಉಪನಿಷತ್ತು, ಶ್ರೀ ಶಂಕರರ ಅದ್ವೈತ ತತ್ತ್ವದ ತಿಳಿಯಾದ ನಿರೂಪಣೆ ತತ್ತ್ವದರ್ಶನ, ಮುಂತಾದವುಗಳಿಂದ ಒಡೆಯರ ಕೃತಿಗಳಿಗೆ ಪ್ರತ್ಯೇಕ ತೇಜಸ್ಸು ಒದಗಿದೆ ಎಂದರೆ ತಪ್ಪಾಗಲಾರದು. ಇವುಗಳನ್ನು ಅಲ್ಲಲ್ಲಿ ಹೆಕ್ಕಿ ತೋರಿದರೇ ಸ್ಪಷ್ಟವಾಗುವುದು.

''ವರದಹರಾಕಾಶ ಮಧ್ಯವರ್ತಿನೀ [ಕಾಮಾಕ್ಷಿ ವಸಂತ ರೂಪಕತಾಳ] ಇಲ್ಲಿ ಛಾಂದೋಗ್ಯ ಉಪನಿಷತ್ತಿನ ಉಲ್ಲೇಖ.

''ಅಜಾಮೇಕಾಮಿತಿ [ಶುದ್ಧ ಸಾಳವಿ ಸುಜ್ಞಾನದಾಮಿನಿ ಆದಿ] ''ಅಜಾಂ ಏಕಾಂ ಲೋಹಿತ ಶುಕ್ಲಕೃಷ್ಣಾಂ ಬಹ್ವೀಂ ಪ್ರಜಾಂ ಜನಯಂತೀಂ ಸ್ವರೂಪಾಂ''-ಎಂಬ ವೇದಮಂತ್ರದ ಬಳಕೆ ಇಲ್ಲಾಗಿದೆ.

''ನಾಹಂ ದೇಹೋಹಂ ಬ್ರಹ್ಮಾಸ್ಮೀ [ನಾಗಸ್ವರಾವಳಿ ಗಂಗಣಪತೇ ಏಂ'' ತ್ರಿಪುಟ] ''ಅಹಂ ಬ್ರಹ್ಮಾಸ್ಮೀ - ಅದ್ವೈತ ತತ್ತ್ವ ಪ್ರತಿಪಾದನೆ ಹೀಗೆ ಪ್ರತಿಯೊಂದು ಕೃತಿಯಲ್ಲಿಯೂ ತನ್ನದೇ ಆದ ವಿಶಿಷ್ಟತೆಯನ್ನು, ಇದರೊಂದಿಗೆ ಶ್ರೀ ವಿದ್ಯೋಪಾಸನೆಯ ಅಂಶಗಳೂ ಸೇರಿರುವ ಕೃತಿಗಳಿವೆ.

''ಸತ್ಯಂಜ್ಞಾನಮನಂತೇತ್ಯಾದಿ ವೇದ ವಾಕ್ಯತಿಪಾದಿ'' - ತೈತ್ತರೀಯ ಉಪನಿಷತ್ತಿನ ಉಲ್ಲೇಖ - ''ಶ್ರೀ ಕೇಶವಾದಿ ಚತುರ್ವಿಂಶ, ಕೃತಪ್ರಾ ಮಾತೃಕೇಶ್ವರಿ'' - ಶ್ರೀ ವಿದ್ಯಾಉಪಾಸನೆಯ ತಂತ್ರದ ಬಳಕೆಯನ್ನು

ಕುರಿತಾದ ಪ್ರಸ್ತಾಪ - ''ಆರ್ಯ ಸಂಸ್ಕೃತಿ ಮೂಲ ಭೂತೇ'' - ಭಾರತೀಯ ಇತಿಹಾಸದ ವಿಷಯ ಹೀಗೆ ಹಲವಾರು ಅಂಶಗಳನ್ನು ಕೃತಿಯ ಮೂಲಕ ವ್ಯಕ್ತ ಪಡಿಸಿರುವ ಒಡೆಯರ ಕೃತಿಗಳಿಗೆ ಇಂತಹ ಅಂಶಗಳಿಂದಾಗಿ ವಿಶೇಷ ಭಾವ ಮೂಡಿದೆ ಎನಿಸುತ್ತದೆ.

ಇಷ್ಟೇ ಅಲ್ಲದೆ, ಹಲವಾರು ಪುರಾಣ ಪ್ರಸಂಗಗಳು ಕ್ಷೇತ್ರ ಮಹಾತ್ಮೆಯನ್ನು ನಿರೂಪಿಸುವ ಅಂಶಗಳೂ ಕೃತಿಗಳಲ್ಲಿ ಬಂದಿದೆ.

ಒಡೆಯರ ಭಾಷಾ ಪ್ರೌಢಿಮೆ, ಕೃತಿಗಳಲ್ಲಿ ಅವರು ಬಳಸಿರುವ ಕ್ಲಿಷ್ಟ ವಾಕ್ಯಗಳು, ಪ್ರಾಸಗಳು, ಯಮಕಗಳನ್ನು ಬಳಸಿರುವುದರ ಮೂಲಕ ತಿಳಿಯಬರುತ್ತದೆ. ಒಂದೇ ಒಂದು ಉದಾಹರಣೆ ನೀಡುವುದಾದರೆ- ''ಪ್ರತಾಪವರಾಳಿ ಮಹಾಕಾಳಿ ಯದಿದ್ಯಾಮಿತದ್ವೇಷಿ ಭೃತಭಕ್ತಾಳಿ ಲಹರಿ ಭೂರಿ ಭಾಗ್ಯ ಲಹರಿ ಪ್ರತಾಪ ನಾದ ಬ್ರಹ್ಮ ಸಂಜಾತ ನಾಹಂ ಜೀವೋಹಂ ಬ್ರಹ್ಮಾಸ್ಮೀತಿ ಪ್ರತಿಪಾದಿತ ಸುನಾದನಾಗಸ್ವರಾಳಿವಿಭೂಷಿತ ಸೋಹಂ ಭಾವ ಸಹಿತೈಕದಂತ'' - (ನಾಗಾಸ್ವರಾವಳಿ ಗಂಗಣಪತೇ, ಮಿಶ್ರಪುಟ 94 ಕೃತಿಗಳಲ್ಲೂ ಯಾವುದಾದರೂ ಒಂದು ಅಂಶ ವಿಶೇಷವಾಗಿಯೇ ಇರುವುದು - ಒಡೆಯರ ಕೃತಿಗಳ ವೈಶಿಷ್ಟ್ಯ.

ಪ್ರಾಸಗಳನ್ನು ಬಳಸಿರುವುದರ ಒಂದು ಉದಾಹರಣೆ ನೋಡಿದರೆ ಚಿತ್ತ ತ್ವ ಚಿದಗ್ನಿಕುಂಡ ... ಚಿಂತಿತಾರ್ಥ ಚಿತ್ರಜಾಂ... ಚಿತ್ರಕಾಶ... ಚಿಚ್ಛಕ್ತ್ಯಾ... ಧೀಮುಕ ಚಿಂತಯಾಮಿ... ತ್ರಿಸ್ವರುಝಂಪೆ] ಅಂತೆಯೇ ಪದಗಳೊಡನೆ ಸರಸವಾಡುವ ಕಲೆ. ಒಡೆಯರಿಗೆ ಕರಗತ ''ಕಲಾವತೀಂ ಕರಾವಳೀಂ, ಕಾಳಿಕಾರೂಪಿಣೀಂ. ಕಾತ್ಯಾಯನೀಂ ಕಾಲರೂಪಿಣೀಂ'' - ಕಾಮಾಕ್ಷೀಂ ವಸಂತ ರೂಪಕ) ''ಸುಜನ ಪಾಲನೀಂ ಸುಮತೀಂ ಶ್ರೀ ಸುಂದರೀಂ ಸುರಭಿಕಾಮಧೇನು ಸ್ವರೂಪಿಣೆ ಸುಮಿತ್ರಾಂ ಸಾವಿತ್ರೀಂ'' - (ಸುಜ್ಞಾನದಾಯಿನೀರಿ ಶುದ್ಧ ಸಾಳವಿ)

''ಶ್ರೀ ವಿದ್ಯಾ'' - ಒಡೆಯರ ಅಂಕಿತ ಪರ್ಯಾಯ ಯಮುದ್ರೆಯಾಗಿ 'ಚಿತ್ರಬಾವನಂದರಾಜಯೋಗೀಂದ್ರ'' -''ಶ್ರೀ ನಾಗಲಿಂಗಪ್ರಿಯ'' ''ನಾಗ ಲಿಂಗವರಪುತ್ರ'' ಎಂಬುದಾಗಿ ಕೃತಿಗಳಲ್ಲಿ ಬಳಸಲ್ಪಟ್ಟಿವೆ. ಇದೊಂದರದಿಗೇ ಮುಕ್ಕಾಲು ಭಾಗ ರಚನೆಗಳಲ್ಲಿ ರಾಗ ಮುದ್ರೆ ಮೂಡಿಬಂದಿದೆ. ''ಬ್ರಹ್ಮಾಂಡವಲಯೇ'' - (ಮಾಂಡ) ''ಸರಸಾಂಗ್ಯರ್ಧಣಾಂರೀಶ್ವರಂ'' -(ಸರಿಸಾಂಗಿ)'' ''ಕಾಮಧೇನುಕಾತಿಶಯ'' (ಧೇನುಕ) ಕೌಶಲ್ಯಪೂರ್ಣವಾಗಿ ಬಳಸಲ್ಪಟ್ಟಿವೆ.

ಇಷ್ಟೆಲ್ಲ ವಿವಿಧತೆ, ವಿಶಿಷ್ಟತೆಗಳನ್ನು ಪ್ರಯೋಗಿಸಲು ಒಡೆಯರು ಬಳಸಿರುವ ಮಾಧ್ಯಮ, ರಚನಾಪ್ರಕಾರಗಳಲ್ಲಿ 'ಕೃತಿ' ಪ್ರಕಾರ ಮಾತ್ರ. ''ಸಂಗೀತ ಬಂಧಗಳಲ್ಲೆಲ್ಲಾ ಅತಿ ಇಂಪಿನಾಳ್ದ ಗೇಯ'' ''ಅತ್ಯಂತ ವಿಕಸಿತ ಕುಸುಮ'' ಕೃತಿ ಎಂಬುದು ಒಡೆಯ ಮನವರಿಕೆಯಾಗಿದ್ದಿರಬಹುದು. ಕೃತಿಯ ಸಾಮಾನ್ಯ ಅಂಗಗಳಾದ ಪಲ್ಲವಿ, ಅನುಪಲ್ಲವಿ ಚರಣಗಳ ಜೊತೆಗೆ ಚಿಟ್ಟೆಸ್ವರಗಳ ಚಿತ್ರ ವಿಚಿತ್ರ ಅಲಂಕಾರ, ಅನುಲೋಮ, ವಿಲೋಮಗಳ ಸಂಯೋಗ,



ಶ್ರೀ ಜಯಚಾಮರಾಜೇಂದ್ರ ಒಡೆಯರ್

ಅದಕ್ಕನುಗುಣವಾಗಿ ಹೆಣೆದ ಸ್ವರ ಸಾಹಿತ್ಯ ಸಿಂಗಾರ, ಶೊಲ್ ಕಟ್ಟು ಸ್ವರಗಳ ತನನತಾನ, ರಾಗಭಾವವನ್ನು ಬಣ್ಣ ಬಣ್ಣವಾಗಿ ಬಿಂಬಿಸುವ ಸಂಗತಿಗಳ ಉಡುಗೆ, ಸ್ವರಾಕ್ಷರ, ಮಣಿಪ್ರವಾಳ ಸಾಹಿತ್ಯದ ಚಮತ್ಕೃತಿಯ ಮೇಲು ಹೊದಿಕೆ ಇಷ್ಟೆಲ್ಲ ಅಲಂಕಾರಿಕ ಅಂಶಗಳು ಕೃತಿಯ ಆಂತರಿಕ ಸೌಂದರ್ಯ ಹೆಚ್ಚಿಸಿರುವುದೇ ಅಲ್ಲದೆ, ವಾಗ್ಗೇಯಕಾರನ ಕಲ್ಪನಾ ಶಕ್ತಿಗೆ ಸವಾಲೊಡ್ಡುವ 'ಕೃತಿ ಪ್ರಕಾರ' ಒಡೆಯರನ್ನು ಆಕರ್ಷಿಸಿರುವುದರಲ್ಲಿ ಅಚ್ಚರಿಯೇನಿಲ್ಲ, 'ಭಗದ್ಮಹಿಮೆಯನ್ನು ಪಾಡಿ, ಪೊಗಳಿ, ಕೃತಾರ್ಥ'ರಾಗುವುದೊಂದೇ ಒಡೆಯರ ಧ್ಯೇಯವಾಗಿದ್ದು' ಕೇವಲ ಈ ಕಾರಣದಿಂದಾಗಿಯೇ 'ಕೃತಿ' ಪ್ರಕಾರವೊಂದನ್ನು ಆಯ್ದುಕೊಂಡರು.

ಮೇಲಿನ ಇಷ್ಟೂ ಅಂಶಗಳನ್ನು ಒಂದು ಮುಖವಾಗಿ ಸಂಗೀತ ದೃಷ್ಟಿಯಿಂದ ರಾಗ ಹಾಗೂ ತಾಳಗಳು ಒಡೆಯರ ಕೃತಿಗಳಲ್ಲಿ ಹೇಗೆ ಬಳಸಲ್ಪಟ್ಟಿವೆ ಎನ್ನುವುದೂ ಮತ್ತೊಂದು ವಿಶೇಷವಾದ ಅಂಶ.

ಒಡೆಯರು ತಮ್ಮ 94 ಕೃತಿಗಳಿಗೂ ಬಳಸಿರುವ ಯಾವುದೇ ಒಂದು ರಾಗವೂ ಪುನರಾವರ್ತನೆಯಾಗಿಲ್ಲ. ಜನಕ ಜನ್ಯರಾಗಗಳಲ್ಲಿ ಹೆಚ್ಚು ಬಳಕೆಯಿರುವ, ಬಳಕೆಯಿಲ್ಲದಿರುವ, ಅತಿ ಪುರಾತನ, ಅತಿ ನೂತನ, ಹೊಸದಾಗಿ ಆವಿಷ್ಕಾರಗೊಂಡ ರಾಗಗಳು ಇದರಲ್ಲಿ ಒಳಗೊಂಡಿವೆ. ಹೆಚ್ಚು ಪರಿಚಿತ, ಬಳಕೆಯಿರುವ ರಾಗಗಳಾದ ಕಲ್ಯಾಣಿ, ತೋಡಿ, ಶಂಕರಾಭರಣ, ಹಿಂದೋಳ, ಅಠಾಣ, ನಾಟಿ, ಮಧ್ಯಮಾವತಿ ಮುಂತಾದ ಪುರಾತನ ರಾಗಗಳಾದ ನಾರಾಯಣ ಗೌಳ, ಯದುಕುಲಕಾಂಭೋಜಿ. ರಾಗಗಳ ಜೊತೆಗೆ, ಗ್ರಂಥಸ್ಥ ವಾದ ರಾಗಗಳಾದ ದೂರ್ವಾಂಕಿ, ಶಿವಕಾಂಭೋಜಿ, ನೀಲವೇಣಿ, ಭಾನು ಚಂದ್ರಿಕೆ, ಅಂತೆಯೇ ಒಡೆಯ ರಿಂದಲೇ ಹೊಸದಾಗಿ ರೂಪಿಸಲ್ಪಟ್ಟ ರಾಗಗಳು ಜಯಸಂವರ್ಧಿನಿ, ಭೂಪಾಲಪಂಚಮ, ಸುರನಂದಿನಿ ಮುಂತಾದವು.

ರಾಗಗಳ ಆಯ್ಕೆಯಲ್ಲಿ ಮತ್ತೊಂದು ವಿಶೇಷ. ಕೃತಿಗಳ ಸಾಹಿತ್ಯಕ್ಕೆ ಹೆಚ್ಚಿನ ಸೌಂದರ್ಯವುಂಟಾಗುವಂತೆ ರಾಗಗಳನ್ನು ಆರಿಸಿದ್ದರೆ, ಉದಾ ಭೈರವರಾಗದಲ್ಲಿ ಶಿವನ ರೂಪಗಳಲ್ಲೊಂದಾದ ಭೈರವ ಸ್ವರೂಪವನ್ನು ವರ್ಣಿಸಿರುವುದು ಸಿಂಹ ವಾಹಿನಿಯಲ್ಲಿ ಮಹಿಷ ಮರ್ದಿನಿಯನ್ನು ಸ್ತುತಿಸಿರುವುದು ಹಂಸವಿನೋದಿನಿ ಯಲ್ಲಿ ಸರಸ್ವತಿಯನ್ನು ಬಣ್ಣಿಸಿರುವುದು.

ಅಷ್ಟೇ ಅಲ್ಲದೆ, ಒಂದೇ ಗುಚ್ಛಕ್ಕೆ ಸೇರಿದ ರಾಗಗಳನ್ನು ಆರಿಸಿರುವುದೂ ವಸಂತ, ವಸಂತಭೈರವಿ, ಹಿಂದೋಳ ವಸಂತ, ವೀರ ವಸಂತ, ಕಲ್ಯಾಣ ವಸಂತ, ವಿಜಯವಸಂತ, ಭೋಗ ವಸಂತ, ಉದಯರ ವಿಚಂದ್ರಿಕಾ, ಭಾನುಚಂದ್ರಾ, ಪೂರ್ಣಚಂದ್ರಿಕಾ, ಹರಿಕಾಂಭೋಜಿ, ಶಿವಕಾಂಭೋಜಿ, ಯದುಕುಲ ಕಾಂಭೋಜಿ, ಹಿಂದೋಳ, ಹಿಂದೋಳ ದೇಶಿಕ, ಹಿಂದೋಳ ದರ್ಬಾರ್, ಹಿಂದೋಳ ವಸಂತ, ಮಾರ್ಗ ಹಿಂದೋಳ, ಹೀಗೆ ಆಯ್ಕೆ ಮಾಡುತ್ತಾ ಹೋಗಬಹುದು.

ಶಂಕರಾಭರಣ, ಒಡೆಯರಿಗೆ ಬಹಳ ಪ್ರಿಯವಾದ ರಾಗ ಕಾರಣ, ಪಿಯಾನೋ ವಾದ್ಯ ಪಟುಗಳಾದ ಒಡೆಯರಿಗೆ, ಶಂಕರಾಭರಣ ಅಥವಾ ಪಾಶ್ಚಾತ್ಯ ಸಂಗೀತದ C. Major Scale ಹೆಚ್ಚಿನ ಪ್ರಭುತ್ವವಿದ್ದುದು ವಿದಿತವಾದ ವಿಷಯವೇ. ಅದರ ಸೂಕ್ತ ಪ್ರಯೋಗವನ್ನು ಶಂಕರಾಭರಣ ರಾಗದಲ್ಲಿ ರಚನೆಯಲ್ಲಿ ಮಡಿದುದೇ ಅಲ್ಲದೆ, ರಾಗದ ಎಲ್ಲ ಸಾಧ್ಯಾಸಾಧ್ಯತೆಗಳನ್ನು ಬಳಸಿಕೊಂಡು ರಚನೆ ಮಾಡಿದ್ದಾರೆ ಅಂತಹವುಗಳಲ್ಲಿ ಕೆಲವು ಹಂಸವಿ ನೋದಿನಿ, ದೂರ್ವಾಂಕಿ, ಕೋಕಿಲಭಾಷಿಣಿ ಮುಂತಾದವು.

ಮತ್ತೊಂದು ವಿಶೇಷವೆಂದರೆ ಶ್ರೀ ಮುತ್ತುಸ್ವಾಮಿ ದೀಕ್ಷಿತರಂತೆ ಶುದ್ಧ ಧನ್ಯಾಸಿ ಮತ್ತು ಉದಯರ ವಿಚಂದ್ರಿಕೆ ಎರಡೂ ರಾಗಗಳಲ್ಲೂ ರಚಿಸಿ, ಅದೇ ಪಂಥದ ಪ್ರಕಾರ ಕ್ರಮವಾಗಿ ಕೈಶಿಕಿನಿಷಾದ ಮತ್ತು ಕಾಕಲಿನಿಷಾದ ಪ್ರಯೋಗ ಮಾಡಿದ್ದಾರೆ.

ಇನ್ನೂ ತಾಳಗಳ ವಿಷಯವನ್ನು ತೆಗೆದುಕೊಂಡಾಗ ಒಬ್ಬ ವಾಗ್ಗೇಯಕಾರ ರಚನೆಗಳನ್ನು ರಚಿಸುವಾಗ ತನ್ನ ಪ್ರತಿಯೊಂದೂ ಕೃತಿಯೂ ಒಂದೊಂದು ನಿಟ್ಟಿನಿಂದಲೂ ವಿಶೇಷವಾಗಿರಬೇಕೆಂದು ಆಶಿಸುವುದು ಸಹಜ. ಅದಕ್ಕಾಗಿ ಹೆಚ್ಚಿನ ಆಸ್ಥೆ ವಹಿಸಿ, ರಚನೆ ಮಾಡಬಯಸುತ್ತಾನೆ. ಅಂತೆಯೇ ಒಡೆಯರು. ತಮ್ಮ ರಚನೆಗಳಲ್ಲಿ ಸಂಗೀತದ ಪ್ರಮುಖ ಅಂಶವಾದ

ತಾಳಗಳ ವಿಷಯದಲ್ಲಿಯೂ ತಮ್ಮ ಮೇಧಾವಿತನವನ್ನು ತೋರಿದ್ದಾರೆ. ವಾಗ್ಗೇಯಕಾರರು ಸಾಮಾನ್ಯವಾದ ಆದಿ, ರೂಪಕ ಹೆಚ್ಚೆಂದರೆ ಮಿಶ್ರಝಂಪೆ, ತ್ರಿಪುಟತಾಳಗಳನ್ನು ಬಳಸದಿರುವುದು ಕಾಣಬರುತ್ತದೆ. ಆದರೆ ಒಡೆಯರು ವಿಶೇಷವಾಗಿ ಧ್ರುವತಾಳ ಒಂದೂ ಬಳಸದಿರುವುದು. ಅಲ್ಲದೆ 35 ಸುಳಾದಿ ತಾಳಗಳ ಪ್ರಭೇದಗಳನ್ನು ಅಂದರೆ, ಖಂ ಮಠ ಸಂಕೀರ್ಣ ತ್ರಿಪುಟ, ಚತುರಶ್ರ ಧ್ರುವ, ತ್ರಿಶ್ರಝಂಪೆ ಮುಂತಾದ ತಾಳಗಳನ್ನು ಬಳಸಿದ್ದಾರೆ. ನಿಜಕ್ಕೂ ಒಬ್ಬ ಕ್ರಿಯಾಶೀಲತೆಯನ್ನು ಸಂಕೇತ. ಅತಿ ಕಡಿಮೆ ಅಕ್ಷರಕಾಲದ ತಾಳವಾದ ತ್ರಿಶ್ರಝಂಪೆ (ಧೇನುಕಾ ಚಿಂತಯಾಮಿ) ತಾಳದಲ್ಲೇ ಅಲ್ಲದೆ, ಚತುರಶ್ರದ್ರು ಮಠಾಳ (ಕ್ಷೀರಾ ಸಾಗರ ಮಾಯಾಮಾಳವಗೌಳ) ಆಯಾ ತಾಳಗಳ ಅಕ್ಷರ ಕಾಲಕ್ಕೆ ತಕ್ಕಂತೆ, ಪಾದಗಳು ವಿಸ್ತೃತವಾಗಿದೆ.

ತಾಳದ ಮುಖ್ಯ ಪ್ರಾಣಗಳಗಳಲ್ಲೊಂದಾದ ಗ್ರಹದ ಬಳಕೆಯನ್ನು ಒಡೆಯರು ಅತಿ ಸಮರ್ಥವಾಗಿ ನಿರ್ವಹಿಸಲಿದ್ದಾರೆ ಎನ್ನುವುದು ಗಮನಾರ್ಹ. ಸಮ, ವಿಷಮ ಗ್ರಹಗಳೆರಡೂ ಚೆನ್ನಾಗಿ ಬಳಕೆಯಾಗಿದೆ. ಸಮಗ್ರಹದ ಜೊತೆಗೇ ವಿಷಮ ಗ್ರಹದ ಭೇದಗಳಾದ ಅತೀತ ಅನಾಗತಗಳು ಬಹಳ ಸೊಗಸಾಗಿ ಬಳಸಲ್ಪಟ್ಟಿದೆ. ಒಂದೆರಡು ಉದಾಹರಣೆಗಳನ್ನು ನೋಡುವುದಾದರೆ ಸಮ ||ಕರ್ಮ ಜ್ಞಾನ ಬೋಧನಿಂ| ನೀಲಕಂಠ ಕುಟುಂಬಿನಿಂ ಧರ್ಮಾದಿ ಸಕಲ ಪುರುಷಾರ್ಥ ದಾಯಿನೀಂ ಹರಿಣೀಂ| (ಕೋಕಿಲ ಪ್ರಿಯ ತ್ರಿಶ್ರತ್ರಿಪುಟ) ವಿಷಮದಲ್ಲಿ ಅನಾಗತ ||ಲೀಚಿಂತಯ ಸದಾವಾರಣ ವದನಂ (ಸಿಂಧುರಾಮ ಕ್ರಿಯ-ಆದಿ) ಅತೀತ (ಹಿಂದಿನ ಧೃತ) ಲೀಎ|| ಭ್ಗ್ನ ನಾಶಕವಿರಾಗಿಣಾವಿದೇಗ ಮುಕ್ತೇಶ್ವರಂ|| (ಮಹಾಗಣಪತಿಂ ಅಮೃತವಾಹಿನಿ ಆದಿ)

ಇನ್ನೂ ಆವರ್ತದ ಮಧ್ಯಮದಲ್ಲಿಯೇ ಗ್ರಹಗಳ ಬಳಕೆ-||ಅಂತರ್ಮುಖಿ ಜ್ಯೋತಿರ್ಮಯ ಕಲ್ಯಾ| ಣೇ ಅಹಿನಿಭವೇಣಿ ನೆ ಪುರಾಣೇ|| ಅಂತರಹಿತ ಕೈವಲ್ಯ ವಿಹಾ| ರಿಣಿಗತಿ ನಿರ್ಜಿತಾ| ಕರಿಣಿ ಗೀರ್ವಾಣಿ|| (ಬ್ರಹ್ಮಾಂಡ ವಲಯೇ ಮಾಂಡ್ ಆದಿ) ಈ ರೀತಿಯ ಹಲವು ಕೃತಿಗಳು ದೊರೆಯುತ್ತವೆ.

ಮತ್ತೊಂದು ವಿಶೇಷವೆಂದರೆ ವಸಂತ ಭೈರವಿ ರಾಗದ 'ವಂದೇ ಜಗದಂಬಿಕೆ' ಖಂಡಝಂಪೆ ತಾಳದ ಕೃತಿಯಲ್ಲಿ ಒಂದೇ ಆವರ್ತದಲ್ಲಿ ಎರಡು ನಡೆಗಳ ಪ್ರಯೋಗ ಅನುಪಲ್ಲವಿಯ ಉತ್ತರಾರ್ಧದಲ್ಲಿ ||ಪರ್ವತಾತ್ಮಜೇ ಸಂಪ್ರತ್ಯದೇ ಸಂಪ್ತೂ| ಜಿತೇ|| ಸಂಸರ್ಗೇ ದುಂದುರ್ಗೆ|| ಒಂದು ಧೃತ ಮಾತ್ರ ತ್ರಿಶ್ರದಲ್ಲಿ ಬರುತ್ತದೆ. ಇದು ಒಡೆಯರ ವಿಶೇಷ. ಅಂತೆಯೇ ಹಾಟಕಾಂಬರಿ ರಾಗದ ಹಾಟಕೇಶ್ವರಂ ತ್ರಿಶ್ರತ್ರಿಪುಟ ತಾಳದ ಕೃತಿ ಮೊದಲಿನಿಂದಲೂ ಚತುರಶ್ರನ ನಡೆಯಲ್ಲಿ ಬಂದು ಚರಣದ ಉತ್ತರಾರ್ಧದಲ್ಲಿ ಮಧ್ಯಮ ಕಾಲ ಸಾಹಿತ್ಯ ಮಾತ್ರ ತ್ರಿಶ್ರಕ್ಕೆ ಜಾರುತ್ತದೆ||ಪರಮಾದ್ಭುತ ಲೀಲಾಸುಚರಿತ್ರಂ|| ಪರಮಾದ್ವೈತಪವಿತ್ರಂ|| ವರಗುಹ ವಿಶ್ವಾಸಪಾತ್ರಂ ಹಾಟಕೇಶ್ವರಂ'-

ಮತ್ತೊಂದು ರೀತಿಯ ವಿಶೇಷ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳಂತೆ. ಪಲ್ಲವಿ, ಅನುಪಲ್ಲವಿಗಳ ಜೊತೆಗೆ 4-5 ಚರಣಗಳಿದ್ದು, ಅವುಗಳನ್ನು ಮಧ್ಯಮ ಕಾಲದಲ್ಲಿ ಸ್ವರ ಹಾಡಿ, ಸಾಹಿತ್ಯ ಹಾಡುವ ಪದ್ಧತಿ. ಉದಾ: ಕಮಲಾಂಬಿಕೆ ನಾಟ ಖಂ||ಝಂಪೆ ಸ್ವಾಮಿನಾಥ ಚಾರುಕೇಶಿ ಖಂ||ತ್ರಿಪುಟ ಭಜಗೋವಿಂದಂ ಭೂಪಾಲಪಂಚಮ ಆದಿ ಇವೇ ಮುಂತಾದುವು ಮೂರು 4 ಕೃತಿಗಳು ದೊರಕುತ್ತವೆ. ನಾಟರಾಗದ ಕೃತಿಯಲ್ಲಿ ಚರಣಗಳೆಲ್ಲ ಆದ ನಂತರ ಮುದ್ರಾದ ಒಂದು ಚಿಟ್ಟೆ ಸ್ವರವಿದೆ. ಇದೇ ಗುಂಪಿಗೆ ಸೇರುವ ಆದರೆ ಸ್ವಲ್ಪ ವಿಶೇಷವೆನಿಸಿದ ರೀತಿ ವಸಂತ ರಾಗದ ಕಾಮಾಕ್ಷೀಂ ರೂಪಕ ಕೃತಿಯಲ್ಲಿ ಪಲ್ಲವಿ, ಅನುಪಲ್ಲವಿಗಳ ನಂತರ, ಚರಣದಲ್ಲಿ ವರ್ಣದಂತೆ ಒಂದು ಪಾದವಿದ್ದು, ಆನಂತರ ಮೂರು ಮಧ್ಯಮಕಾಲ ಸಾಹಿತ್ಯದ ಚರಣಗಳು ಪ್ರತಿಯೊಂದು ಚರಣವನ್ನು ಹಾಡಿ ಮೊದಲ ಚರಣಕ್ಕೇ ಬರಬೇಕು. ಬಹುಶಃ ಈ ರೀತಿಯ ವೈವಿಧ್ಯಗಳು ಒಡೆಯರನ್ನು ಬಿಟ್ಟು ಮತ್ತೆಲ್ಲೂ ಕಾಣಲಾರೆವು.

ಇನ್ನೂ ಕೃತಿಗಳಲ್ಲಿ ಸಂಗೀತ ಸಾಹಿತ್ಯಗಳ ಹೊಂದಾಣಿಕೆ ಬಗ್ಗೆ ಒಂದೆರಡು ಮಾತು. ಅಠಾಣ ರಾಗ ಆದಿ ಶ್ರೀ ಮಹಾಗಣಪತಿಂ ಮಹಾ ಅಕ್ಷರಕ್ಕೆ 'ದಾ' ಸ್ವರ ಒಳ್ಳೆಯ ಗತ್ತನ್ನು ಒದಗಿಸುತ್ತದೆ. ಪಾಮಪಾ ಜ್ಞಾನಮಂದ್ರಾಲಂಕೃತ ಒಂದೇ ಸ್ಥಳದಲ್ಲಿ ನಿಲ್ಲುವ ಸಂಚಾರ ಧ್ಯಾನ ಮುದ್ರೆಯನ್ನು ಸೂಚಿಸುತ್ತದೆ. 'ಪರಿಪಾಹಿಮಾಂ' ಎನ್ನುವಾಗ ಅವರೋಹಣದಲ್ಲಿ ಬರುವ ಸಂಗೀತದ ಸಂಚಾರ ಶರಣಾಗತಿಯ ಪ್ರತಿಬಿಂಬಿಸುತ್ತದೆ. 'ಪಾಹಿಮಾಂ' ಎನ್ನುವಾಗ ಮಧ್ಯಮ ಸ್ವರಕ್ಕೆ 'ಮಾ'ಂ ಅಕ್ಷರ ದೈನ್ಯತೆಯ ಪ್ರತೀಕವಾಗಿ ನಿಲ್ಲುತ್ತದೆ.

ಹೀಗೆ ಹೇಳುತ್ತಲೇ ಹೋದಷ್ಟೂ ದೊರಕುತ್ತವೆ ವೈವಿಧ್ಯ ವೈಶಿಷ್ಟ್ಯಗಳು.

ಕೀರ್ತಿಗಾಗಿ, ಹೆಸರಿಗಾಗಿ ಆಸೆಪಡದ ಒಡೆಯರು ತಮ್ಮ ಕೃತಿ ರಚನೆಗೆ ನೀಡಿದ ಮಹತ್ವವನ್ನು ಅದರ ಪ್ರಕಟಣೆಗಾಗಲೀ, ಪ್ರಚಾರಕ್ಕಾಗಲೀ ಬಳಸಿದ್ದರೆ, ಇಂದು ಎಲ್ಲರ ಬಾಯಿಯಲ್ಲೂ ಈ ಎಲ್ಲಾ ವೈಶಿಷ್ಟ್ಯಪೂರ್ಣ ಕೃತಿಗಳು ನಲಿದಾಡಲು ಸಾಧ್ಯವಾಗುತ್ತಿತ್ತು. ಆದರೆ ಹಾಗಾಗದೇ ಹೋದುದು, ಕರ್ನಾಟಕ ಸಂಗೀತಾರಾಧಕರ ದುರಾದೃಷ್ಟ, ಕನ್ನಡಿಗರ ದುರ್ದೈವ ಎಂದು ಹೇಳದೆ ವಿಧಿಯಿಲ್ಲ.

+

## ಪ್ರಕಟಣೆ

ಮೈಸೂರು ಅಸೋಸಿಯೇಷನ್ನಿನಲ್ಲಿ ಕಳೆದ ಮೂರು ತಿಂಗಳುಗಳಿಂದ ಪ್ರತಿ ತಿಂಗಳೂ ನಾಟಕ ವಾಚನ ಕಾರ್ಯಕ್ರಮವು ನಡೆಯುತ್ತಾ ಬರುತ್ತಿದೆ. ಈ ತಿಂಗಳಿನ ಕಾರ್ಯಕ್ರಮದಲ್ಲಿ ಡಾ. ಶಿವರಾಮ ಕಾರಂತರ ಒಂದೇ ಹಾಡು ಎಂಬ ನಾಟಕವನ್ನು ಓದಲಾಯಿತು. ಮುಂದಿನ ತಿಂಗಳಿನಲ್ಲಿ, ಸೋಮವಾರ ೨೮ರಂದು ಸಂಜೆ ೬.೦೦ಕ್ಕೆ ಈ ಸರಣಿಯಲ್ಲಿ ಗಿರೀಶ್ ಕಾರ್ನಾಡರ 'ಹಿಟ್ಟಿನ ಹುಂಜ' ನಾಟಕವನ್ನು ಓದಲಾಗುವುದು. ನಾಟಕವನ್ನು ಓದಿದ ನಂತರ ಅದರ ಪ್ರಯೋಗಕ್ಕೆ ಉಪಯೋಗಿಸಬಹುದಾದ ತಂತ್ರಗಳ ಬಗ್ಗೆ ಚರ್ಚೆಯು ನಡೆಯುವುದು. ನಾಟಕಾಸಕ್ತರೆಲ್ಲರೂ ಈ ಕಾರ್ಯಕ್ರಮದಲ್ಲಿ ಸಕ್ರಿಯರಾಗಿ ಭಾಗವಹಿಸಬೇಕು ಎಂದು ನಮ್ಮ ಕೋರಿಕೆ.

| | | |
|---|---|---|
| ದಿನಾಂಕ | : | ೨೮ ಎಪ್ರಿಲ್, ಸೋಮವಾರ |
| ವೇಳೆ | : | ಸಂಜೆ ೬.೦೦ಕ್ಕೆ |
| ಸ್ಥಳ | : | ಮೈಸೂರು ಅಸೋಸಿಯೇಶನ್ನಿನ ಸಭಾಗೃಹ |
| ನಾಟಕ | : | ಗಿರೀಶ ಕಾರ್ನಾಡರ "ಹಿಟ್ಟಿನ ಹುಂಜ" |

ಪ್ರತಿ ತಿಂಗಳೂ, ಆ ತಿಂಗಳಿನ ನಾಲ್ಕನೇ ಸೋಮವಾರದು ಈ ನಾಟಕವಾಚನ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು.

TRIMURTI
JEWELLERS
GOLD AND DIAMOND ORNAMENTS
460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.
Phone : 2402 3485

ಕೃತಿ ಪರಿಚಯ

# ತಿರುಪಲ್ಲಾಂಡು ಅನುವಾದ ಮೆಚ್ಚತಕ್ಕ ಪ್ರಸಾದರ ಪ್ರಯತ್ನ

ತಿರುಪಲ್ಲಾಂಡು
ಅನುವಾದ : ಎಂ. ಎ. ಎನ್. ಪ್ರಸಾದ್
ಪ್ರಕಾಶಕರು : ಪಿ.ಎನ್.ಐಯ್ಯಂಗಾರ್ ಚಾರಿಟೀಸ್
ಬೆಂಗಳೂರು
2002
ಬೆಲೆ ರೂ. 20/-

ಎಂ.ಎ.ಎನ್. ಪ್ರಸಾದ್ ಮುಂಬೈ ಕನ್ನಡಿಗರಿಗೆ ಚಿರಪರಿಚಿತರು ಮೈಸೂರು ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿಯಾಗಿ ಉತ್ತಮ ಸಂಘಟಕರಾಗಿ ಹೆಸರುಮಾಡಿದವರು. ಸಂಗೀತ ಸಾಹಿತ್ಯ ನಾಟಕ, ಆಟೋಟ ಹೀಗೆ ಹತ್ತಾರು ಆಸಕ್ತಿಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅನೇಕ ಕನ್ನಡ ನಾಟಕಗಳಲ್ಲಿಯೂ ನಟಿಸಿದ ಅವರೊಬ್ಬ ಒಳ್ಳೆಯ ಸಹೃದಯಿ. ವಿಜ್ಞಾನದ ವಿದ್ಯಾರ್ಥಿಯಾದ ಅವರು ಫಾರ್ಮಸಿ,ಮ್ಯಾನೇಜ್‌ಮೆಂಟ್, ಮಾರ್ಕೆಟಿಂಗ್ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಸಾದ್ ಬಹುಭಾಷಾ ಪ್ರವೀಣರು. ಕನ್ನಡ, ತಮಿಳು, ಹಿಂದಿ ಮೊದಲಾದ ಭಾಷೆಗಳಲ್ಲಿ ಒಳ್ಳೆಯ ಪ್ರಭುತ್ವನ್ನು ಅವರು ಪಡೆದಿದ್ದಾರೆ. ನೇಸರು ತಿಂಗಳೋಲೆಯ ಅಂದ ಚೆಂದವನ್ನು ಹೆಚ್ಚಿಸಿದ ಅವರು ಒಳ್ಳೆಯ ಓದುಗರೂ ಹೌದು. "ತಿರುಪ್ಪಾಂಡು" ಪ್ರಸಾದ್ ಅವರ ಇತ್ತೀಚಿನ ಕೃತಿ ಇದನ್ನು ಅವರು ತಮಿಳಿನಿಂದ ಇಂಗ್ಲೀಷ್‌ಗೆ ಸೊಗಸಾಗಿ, ಸಹಜ ಎಂಬಂತೆ ಅನುವಾದಿಸಿ ಕೊಟ್ಟಿದ್ದಾರೆ. ತಿರುಪಲ್ಲಾಂಡು ಪೆರಿಯಾಳ್ವಾರ್ ವಿರಚಿತ ವರ್ಣನಾತ್ಮಕ ಮುಕ್ತಕಗಳು. ಪೆರಿಯಾಳ್ವಾರ್ ತಮಿಳು ವಾಙ್ಮಯದಲ್ಲಿ ದೊಡ್ಡ ಹೆಸರು. ಅವರು ಈ ತಿರುಪಲ್ಲಾಂಡು ಹಾಡುಗಳನ್ನು ಬರೆಯಲು ಕಾರಣವೇನು? ಯಾವ ಸಂದರ್ಭದಲ್ಲಿ ಈ ಕೃತಿ ಹೊರಹೊಮ್ಮಿತು ಎಂಬಾದಿಯಾದ ವಿವರವನ್ನು ಎಂ.ಎ.ಎನ್. ಪ್ರಸಾದ್ ಅವರು ಈ ಕೃತಿಯ ಆರಂಭದಲ್ಲಿ ಕೊಟ್ಟಿದ್ದಾರೆ. ಈ ಹಾಡುಗಳನ್ನು ದೇವಾಲಯಗಳಲ್ಲಿ ಮನೆಗಳಲ್ಲಿ ಆರಾಧನೆಯ ದಿನದಂದು ಕಡ್ಡಾಯವಾಗಿ ಪಠಿಸಲಾಗುತ್ತದೆ ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ತಮಿಳು ಮೂಲ ಹಾಗೂ ಕನ್ನಡ ಲಿಪಿಯಲ್ಲಿರುವ ಈ ತಿರುಪಲ್ಲಾಂಡು ಪ್ರಸಾದರ ಪ್ರಯತ್ನದಿಂದ ಇಂಗ್ಲೀಷ್‌ಗೆ ದಾಟುವಂತಾಗಿದೆ. ಅನುವಾದ ಮಾತ್ರವಲ್ಲದೆ ವ್ಯಾಖ್ಯಾನ, ಕಠಿಣ ಪದಗಳ ಅರ್ಥವನ್ನು ಇಲ್ಲಿ ಕೊಟ್ಟಿರುವುದರಿಂದ ಈ ಪದ್ಯಗಳನ್ನು ಬಹುಸುಲಭವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಇದೊಂದು ಧಾರ್ಮಿಕ ಕೃತಿಯಾಗಿ ಕಂಡರೂ ಅಲ್ಲಿನ ಕಾವ್ಯ ಗುಣವನ್ನು




ಯಾರೂ ಮೆಚ್ಚಿಕೊಳ್ಳಲೇಬೇಕು. ತಮಿಳಿನಲ್ಲಿ ಒಳ್ಳೆಯ ಸಾಹಿತ್ಯವಿದೆ. ಅದನ್ನು ಇತರ ಭಾಷಿಕರಿಗೆ ಪರಿಚಯಿಸುವ ಕೆಲಸದಲ್ಲಿ ಪ್ರಸಾದ್ ಈ ಮೂಲಕ ಹೆಜ್ಜೆ ಇಟ್ಟಿರುವುದು ಸಂತೋಷದ ಸಂಗತಿ. ಹೊಸ ತಲೆಮಾರಿಗೆ ನಮ್ಮ ಪ್ರಾಚೀನ ಸಾಹಿತ ಸಂಸ್ಕೃತಿಯನ್ನು ಪರಿಚಯಿಸುವ ದೃಷ್ಟಿಯಿಂದ ಪ್ರಸ್ತುತ ಲೇಖಕರ ಪ್ರಯತ್ನಕ್ಕೆ ವಿಶೇಷ ಮಹತ್ವವಿದೆ. ಎಂ.ಎ.ಎನ್. ಪ್ರಸಾದ್ ಅವರು ಈ ದಿಸೆಯಲ್ಲಿ ಇನ್ನಷ್ಟು ಕೆಲಸ ಮಾಡುವಂತಾಗಲಿ ಎಂದು ಶುಭ ಹಾರೈಸೋಣ.

- ಡಾ. ಜಿ.ಎನ್. ಉಪಾಧ್ಯ
ಮುಂಬಯಿ ವಿಶ್ವವಿದ್ಯಾಲಯ

## ಮಾಸ್ತಿಯಾಗುವ ಹೂವು

ದೇವ ಸೃಷ್ಟಿಯ ಈ ಜಗದಲಿ
ಈ ಪಟಪಟನೆ ಪುಟಿದು
ಅರುವಾಗಿ ಅರಳಿರುವ
ಹೂವು ಹೂವಿನಲಿ
ನೀನೊಂದು ಮೀಸಲು ಹೂವು
ಈ ಜಗದ ಈ ಹೂವು ಹೂವುಗಳಲಿ
'ಅನಿಲವಲಗದ
ರವಿಕರಂ ಪುಗದ
ನೀನೆಂಬ ಮೀಸಲನು
ನನ್ನ ಹೂವಾಗಿ ಆಯ್ದು
ನಾನಿನ್ನ ಮಿಡಿದು ಮುಡಿದಾಗ
ನಾ ನೆಂದೆ ನಾ ನಿನಗೆ ಮೀಸಲು !
ಹೀಗೆಂದು ಈ ಜಗದ ಈ ನಡೆಗೆ ಗೆಯಲಿ
ಸಪ್ತವರ್ಣದ ನಿನ್ನ
ಮುಡಿದು ಮಿಡಿಯುತ್ತಿರಲು
ಸಪ್ತರಾಗಗಳೆಲ್ಲ
ಸಪ್ತಪದಿಯಲಿ
ಸಡಗರದಿ ಹೇಳಿದುವು
ಮೀಸಲುಳಿಯಿತು
ನಿನ್ನ ಬೆಳೆದು ಮುತ್ತೈದೆ
ಮಾಸ್ತಿ
ನೀನಾಗುವುದೈ !
ಹಾಗೆಂದು ಮುಡಿಗಡಣ ಸಾಗಿ ಬಂದಾಗ
ನೀನೆನ್ನ
ಕರ್ಪೂರದ ಪರಿಮಳವು
ಕಣ್ಣು ಹೂವುಗಳಾಗಿ
ಮುಡಿಸಿತ್ತು
ನನ್ನಲ್ಲಿ
ನೀ
ಕವನವಾಗಿ !

-- ಪ್ರೊ. ವಸಂತ ಕುಷ್ಟಗಿ

# ಮುಂಬಯಿ ಕನ್ನಡ ಸಂಘದ 67ನೇ ವಾರ್ಷಿಕೋತ್ಸವ ಸಾಂಸ್ಕೃತಿಕ ಉತ್ಸವ

## ಮುಂಬಯಿ ಮಹಾನಗರಕ್ಕೆ ಕನ್ನಡಿಗರ ಕೊಡುಗೆ ಅಪಾರ -ಶ್ರೀ ಸುರೇಶ್ ಶೆಟ್ಟಿ

ಜೀವನೋಪಾಯಕ್ಕಾಗಿ ತಾಯಿನಾಡಾದ ನೆಲದಿಂದ ಮಹಾರಾಷ್ಟ್ರದ ಮುಂಬಯಿಗೆ ಬಂದು, ಉದ್ಯೋಗ, ಉದ್ದಿಮೆ, ವ್ಯಾಪಾರ, ವಾಣಿಜ್ಯ ಮತ್ತು ಕಲೆ ಮೊದಲಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮುಂಬಯಿ ಸರ್ವತೋಮುಖವಾದ ಅಭಿವೃದ್ಧಿಗೆ ಕನ್ನಡಿಗರ ಕೊಡುಗೆ ಅಪಾರವಾಗಿದೆ. ತಮ್ಮ ಭಾಷೆ ಕಲೆ ಸಂಸ್ಕೃತಿಯನ್ನು ಪ್ರೀತಿಸುವಂತೆ ಕನ್ನಡಿಗರ ಮಹಾರಾಷ್ಟ್ರದ ಜನತೆ ಜತೆ ಹೊಂದಿಕೊಂಡು ಸಹ ಬಾಳ್ವೆಯನ್ನು ನಡೆಸಿಕೊಂಡು ಹೋಗುವಂತಹ ಉತ್ತಮ ಸಂಸ್ಕೃತಿಯನ್ನು ಹೊಂದಿದ್ದಾರೆ. ಕನ್ನಡಿಗರಿಗೆ ಕರ್ನಾಟಕ ತಾಯಿಯಾದರೆ, ಮಹಾರಾಷ್ಟ್ರ ಸಾಕು ತಾಯಿ ಎಂದು




ಮಹಾರಾಷ್ಟ್ರ ರಾಜ್ಯ ವೈದ್ಯಕೀಯ ಶಿಕ್ಷಣದ ರಾಜ್ಯ ಸಚಿವರಾದ ಶ್ರೀ ಸುರೇಶ್ ಶೆಟ್ಟಿಯವರು ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಜರುಗಿದ ಮಾಟುಂಗದ ಮುಂಬಯಿ ಕನ್ನಡ ಸಂಘದ 67ನೇ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸುತ್ತಾ ನುಡಿದರು. ಶ್ರೀ ಸುರೇಶ್ ಶೆಟ್ಟಿಯವರು ಮುಂದುವರೆದು ಮುಂಬಯಿ ಕನ್ನಡ ಸಂಘವು ಆರಂಭದಿಂದಲೂ ಕನ್ನಡ ಭಾಷೆ, ಸಂಸ್ಕೃತಿ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿ ಸಂಘಕ್ಕೆ ಯಶಸ್ಸನ್ನು ಹಾರೈಸಿದರು.

ಮುಂಬಯಿ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಜಿ.ಎಸ್. ನಾಯಕ್‌ರವರು ಎಲ್ಲರನ್ನೂ ಸ್ವಾಗತಿಸಿ ಸಂಘದ ಚಟುವಟಿಕೆಗಳ ಬಗ್ಗೆ ತಿಳಿಸಿ ಶ್ರೀ ಸುರೇಶ್ ಶೆಟ್ಟಿಯವರು ಇಂದು ಸಚಿವರಾಗಿರುವುದು ಕನ್ನಡಿಗರೆಲ್ಲರಿಗೆ ಹೆಮ್ಮೆ ಎಂದು ತಿಳಿಸಿ ಸಚಿವರಿಗೆ ಶಾಲು ಹೊದಿಸಿ ಫಲಪುಷ್ಪ ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಆರಂಭದಲ್ಲಿ ಸಂಘದ ಕನ್ನಡ ತರಗತಿ ವಿದ್ಯಾರ್ಥಿಗಳಿಂದ ಪ್ರಾರ್ಥನೆಯಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀ ವಿ.ವಿ. ಬಳೆಗಾರ್‌ರವರು ಸಚಿವರ ಪರಿಚಯವನ್ನು ಮಾಡಿದರು. ಶ್ರೀ ಎಸ್. ವಿ. ಮೋಹನ್ (ಸಂಘದ ಉಪಾಧ್ಯಕ್ಷರು) ಸಚಿವರಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಶ್ರೀ ಬಿ. ನಾಗಭೂಷಣ (ಸಂಘದ ಗೌ. ಪ್ರ. ಕಾರ್ಯದರ್ಶಿ) ವಂದಿಸಿದರು. ಶ್ರೀಮತಿ ಜಯಲಕ್ಷ್ಮೀ ಪಂಡಿತ್ ಕಾರ್ಯಕ್ರಮವನ್ನು ನಿರೂಪಿಸಿದರು.

ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ಸವದ ಅಂಗವಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸಂಘವು ನಡೆಸುವ ಕನ್ನಡ ತರಗತಿ ವಿದ್ಯಾರ್ಥಿಗಳು ಶ್ರೀಮತಿ ಲಕ್ಷ್ಮೀ ಸುಧೀಂದ್ರ ನೇತೃತ್ವದಲ್ಲಿ ಕನ್ನಡ ಗೀತೆಗಳ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಕನ್ನಡೇತರರಾದ ಈ ವಿದ್ಯಾರ್ಥಿಗಳು ಸುಶ್ರಾವ್ಯವಾಗಿ ಕನ್ನಡ ಗೀತೆಗಳ ಗಾಯನ ಮಾಡಿದುದು ಎಲ್ಲರಿಗೂ ಅಚ್ಚರಿಸಲಾಯಿತು. ನಂತರ ನಡೆದ ಬೇಬಿ ಅನುಷ್ಕ ಶೆಟ್ಟಿ ಮತ್ತು ಮಾಸ್ಟರ್ ಕ್ಷಿತೀಶ್ ಶೆಟ್ಟಿಯವರ 'ಬಳೆಗಾರ' ಜಾನಪದ ನೃತ್ಯವು ಎಲ್ಲರನ್ನು ಮಂತ್ರಮುಗ್ಧ ಮತ್ತು ವಿವಿಧ ಭಂಗಿಗಳಿಂದ ಅಭಿನಯಿಸಿದ ಬೇಬಿ ಅನುಷ್ಕಳು ಎಲ್ಲರ ಮೆಚ್ಚುಗೆಗೆ ಪಾತ್ರಳಾದಳು.

ನಂತರ ನಡೆದ ಸಾಹಿತ್ಯ ಕಾರ್ಯಕ್ರಮದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಚಿತ್ರಣ ಎಂಬುದರ ಬಗ್ಗೆ ಸಾಹಿತ್ಯಗೋಷ್ಠಿ ನಡೆಯಿತು. ಈ ಸಾಹಿತ್ಯಗೋಷ್ಠಿಯನ್ನು 'ಸೃಜನಾ' (ಮುಂಬಯಿ ಕನ್ನಡ ಲೇಖಕಿಯರ ಬಳಗ)ದವರು ಪ್ರಸ್ತುತಪಡಿಸಿದರು. ಬಳಗದ ಸಂಚಾಲಕಿ ಶ್ರೀಮತಿ ಮಿತ್ರಾ ವೆಂಕಟ್ರಾಜ್ ಮುಂಬಯಿ ಕನ್ನಡ ಸಂಘವು ಕಳೆದ ವರ್ಷ ಮುಂಬಯಿ ಕನ್ನಡ ಲೇಖಕಿಯರ ಸಮಾವೇಶವನ್ನೂ ಏರ್ಪಡಿಸಿದ್ದು ತದನಂತರ ಲೇಖಕಿಯರು ಒಗ್ಗಟ್ಟಾಗಿ ಹಾಕಿಕೊಳ್ಳಬಹುದೆಂದು ಉದ್ದೇಶದಿಂದ ಸೃಜನಾ ಜನ್ಮ ತಾಳಿತೆಂದು ತಿಳಿಸಿ ಅವರ ಉದ್ದೇಶಗಳನ್ನು ವಿವರಿಸಿದರು.

## ಸುತ್ತಮುತ್ತ

ಶ್ರೀಮತಿ ಶಾಂಭವಿ ಸುಧಾಕರ್‌ರವರು ಪಂಪ ಯುಗದ ಮಹಿಳೆಯರ ಚಿತ್ರಣದ ಬಗ್ಗೆ ವಿಷಯವನ್ನು ಮಂಡಿಸುತ್ತಾ ವಡ್ಡಾರಾಧನೆ, ಪಂಪ ಭಾರತ ಜನ್ನನ ಯಶೋಧರ ಚರಿತೆಯಲ್ಲಿನ ಮಹಿಳೆಯರ ಚಿತ್ರಣವನ್ನು ವಿವರಿಸಿ ಅಲ್ಲಿ ಸಹಾ ಸ್ತ್ರೀ ಶೋಷಣೆ ಇರುವುದೆಂದು ಅಭಿಪ್ರಾಯಪಟ್ಟರು. ವಚನ ಯುಗದ ಚಿತ್ರಣವನ್ನು ಮಂಡಿಸಿದ ಶ್ರೀಮತಿ ತುಳಸಿ ವೇಣುಗೋಪಾಲ್‌ರವರು ವಚನ ಸಾಹಿತ್ಯದಲ್ಲಿ ಲಿಂಗ ತಾರತಮ್ಯವಿಲ್ಲ ಸಮಾನತೆಗಾಗಿ ಸಾಕಷ್ಟು ಪ್ರಯತ್ನಗಳು ನಡೆದಿವೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ ಡಾ ಸುನೀತಾ ಎಂ. ಶೆಟ್ಟಿಯವರು ವಡ್ಡಾರಾಧನೆಯಿಂದ ಪಂಪ ಭಾರತದವರೆಗೂ ಮಹಿಳೆಯ ಸಂಪ್ರದಾಯದಿಂದ ಹೊರ ಬರುವ ಪ್ರಯತ್ನ ನಡೆದಿತ್ತು. ವಚನ ಯುಗದಲ್ಲಿ ಮಹಿಳೆಯರನ್ನು ಸಮಾನ ದೃಷ್ಟಿಯಿಂದ ವಚನಕಾರರು ನೋಡಿದರು ಎಂದು ತಿಳಿಸಿ ಸುಕುಮಾರ ಚರಿತೆ ಮತ್ತು ನಾಗವರ್ಮನ ಸಾಹಿತ್ಯದಲ್ಲಿ ಹೆಣ್ಣನ್ನು ಚಾಂಡಾಲ ಕನ್ಯೆಯನ್ನಾಗಿ ಚಿತ್ರಿಸಿರುವುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು.

ಡಾ ಗಿರಿಜಾ ಶಾಸ್ತ್ರಿಯವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕೊನೆಯದಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಿ.ಎಸ್.ಕೆ.ಬಿ.ಯ ಗೋಕುಲ ಕಲಾ ವೃಂದದ ಮಹಿಳೆಯ ವಿಭಾಗದವರಿಂದ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಬಯಲಾಟದ ಪ್ರದರ್ಶನ ನಡೆಯಿತು. ಸ್ತ್ರೀಯರೇ ಪಾತ್ರಧಾರಿಗಳಾದ ಈ ಪ್ರದರ್ಶನದಲ್ಲಿ ಶ್ರೀಮತಿ ಗೀತಾ ಭಟ್ ಭಸ್ಮಾಸುರ ಪಾತ್ರದಲ್ಲಿ ಮಿಂಚಿದರು ಪಾತ್ರಧಾರಿಗಳ ಹಿಮ್ಮೇಳದವರ ಹಾಗೂ ಭಾಗವತರ ನಡುವೆ ಉತ್ತಮ ಹೊಂದಾಣಿಕೆ ಇದ್ದು ಪ್ರದರ್ಶನವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆಯನ್ನು ಶ್ರೀಮತಿ ಗಾಯತ್ರಿ ರಾಮು ಮಾಡಿದರು. ಒಟ್ಟಿನಲ್ಲಿ ನಾಲ್ಕೂವರೆ ಗಂಟೆಗಳ ಕಾಲ ನಡೆದ ಕಾರ್ಯಕ್ರಮ ಎಲ್ಲರ ಪ್ರಶಂಸೆಗೆ ಪಾತ್ರರಾಗುವಲ್ಲಿ ಯಶಸ್ವಿಯಾಯಿತು. ಕೊನೆಗೆ ಎಲ್ಲರಿಗೂ ಉಚಿತ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

### ರಸಿಕರನ್ನು ರಂಜಿಸಿದ ಜುಗಲಬಂದಿ ಸಂಗೀತ ಮಹೋತ್ಸವ

ಡೊಂಬಿವಲಿಯ ಹಿಂದೂಸ್ಥಾನೀ ಸಂಗೀತ ಅಕಾಡೆಮಿಯವರು ಇತ್ತೀಚೆಗೆ ಏರ್ಪಡಿಸಿದ್ದ ಜುಗಲಬಂದಿ ಸಂಗೀತ ಮಹೋತ್ಸವದ ಕಾರ್ಯಕ್ರಮಗಳು ರಸಿಕರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು. ಮೊದಲನೇ ಕಾರ್ಯಕ್ರಮದಲ್ಲಿ ವಿದುಷಿ ಉಮಾನಾಗಭೂಷಣ್ (ಕರ್ನಾಟಕ) ಮತ್ತು ಡಾ. ರಸಿಕಾ ಫುಡ್ಕೆ (ಹಿಂದೂಸ್ಥಾನಿ) ಗಾಯನದಲ್ಲಿ ಪಾಲ್ಗೊಂಡಿದ್ದರು. ಆರಂಭದಲ್ಲಿ ಹಂಸಧ್ವನಿ ರಾಗದಲ್ಲಿ ವಾತಾಪಿಗಣ

ಪತಿಂಭಜೆ (ಕರ್ನಾಟಕ ಶೈಲಿ) ದಾತಾ ತೂ ಗಣಪತಿ (ಹಿಂದೂಸ್ತಾನೀ ಶೈಲಿ)ಯನ್ನು ಆಲಾಪ್ ಮತ್ತು ಕಲ್ಪನಾ ಸ್ವರಗಳೊಂದಿಗೆ ಸಾದರ ಪಡಿಸಿದರು. ನಂತರ ಶ್ರೀ ಪುರಂದರದಾಸರ ರಾಮ ಎಂಬುವ ಎರಡು ಅಕ್ಷರದ ಮಹಿಮೆಯನ್ನು ರಾಗ ಮಾಲಿಕೆಯಲ್ಲಿ ಪ್ರಸ್ತುತ ಪಡಿಸಿ ರಸಿಕರ ಮೆಚ್ಚುಗೆ ಗಳಿಸಿದರು. ಪುಂಥನಶ್ರೀ ಕಾಮವರ್ಧಿನಿ ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ ಕೃತಿ ವೇಣುಗಾನ ಲೋಲ ಕೃಷ್ಣ - ಆಲೀರೇ ಮೋರಿ ಮನೋಹರರಯನ್ನು ಒಟ್ಟಿಗೆ ಉತ್ತಮ ಹೊಂದಾಣಿಕೆಯಿಂದ, ಸಾಹಿತ್ಯಗಾಯನ, ಕಲ್ಪನಾ ಸ್ವರಗಳ ಪ್ರಚಂಡ ಪ್ರಸಂಸೆಗೆ ಪಾತ್ರರಾದರು. ಜಯಂತ್ ಪುಣೆ ಹಾರ್ಮೋನಿಯಂ, ಅನುಜಾ ಪಿಟೀಲು ನಂಬೀಶನ್ ಮೃದಂಗ, ರಾಘವೇಂದ್ರ ಕುಲಕರ್ಣಿ ತಬಲಾದಲ್ಲಿ ಉತ್ತಮವಾಗಿ ಸಹಕರಿಸಿದರು. ನಂತರ ನಡೆದ ವಾದ್ಯದ ಜುಗಲಬಂದಿ ಸಂಗೀತದಲ್ಲಿ ಪ್ರಕಾಶ ಹೆಗ್ಡೆ (ಬಾಸುರಿ) ವಿಧಿ ಕಾಸ್ಕಿವಾಲ್ (ಸಂತೂರ್) ಕೇಸರಿ ಪುಂಡೆ (ಪಿಟೀಲು) ಮಾಲಕಾಂಸ್ ರಾಗದಾಲಾಪ್ ಮತ್ತು ಬಂದೀಶ್‌ಗಳನ್ನು ಉತ್ತಮ ಹೊಂದಾಣಿಕೆಯಿಂದ ಸಾದರ ಪಡಿಸಿ ಶ್ರೋತೃಗಳ ಮೆಚ್ಚುಗೆ ಗಳಿಸಿದರು. ಲಕ್ಷ್ಮೀಶ ರಾವ್ ತಬಲದಲ್ಲಿ ಸಹಕರಿಸಿದರು.

ಕೊನೆಯ ಕಾರ್ಯಕ್ರಮದಲ್ಲಿ ಮಹೇಶ ಕುಲಕರ್ಣಿ ಮತ್ತು ಬೆಂಗಳೂರಿನ ಫಯಜ್ ಅಹಮದ್ ಹಾಡುಗಾರಿಕೆಯಲ್ಲಿ ಭಾಗವಹಿಸಿದ್ದರು. ಇಬ್ಬರೂ ಕಲಾವಿದರೂ ಅಭೋಗಿಕಾನಡರಾಗದ ಆಲಾಪ್ ಮತ್ತು ಬಂದೀಶ್‌ನ್ನು ಉತ್ತಮ ಹೊಂದಾಣಿಕೆ ಹಾಗೂ ಪಾಂಡಿತ್ಯ ಪೂರ್ಣದಿಂದ ಪ್ರದರ್ಶಿಸಿ ತಾವು ಯಾವ ಹಿರಿಯ ನುರಿತ ಕಲಾವಿದರಿಗೂ ಕಮ್ಮಿಯಿಲ್ಲವೆಂದು ಸಾಬೀತು ಪಡಿಸಿದರು. ಮಿಶ್ರರಾಗದ ಘಜಲ್‌ನ್ನು ಸಾದರಪಡಿಸಿ, ಭೈರವಿದುಮರಿಯಿಂದ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಸಹಕರಿಸಿದರು. ಡೊಂಬಿವಲಿಯಲ್ಲಿ ಮೊಟ್ಟ ಮೊದಲಬಾರಿಗೆ ಆಯೋಜಿಸಿದ್ದ ಈ ಜುಗಲಬಂಧಿ ಸಂಗೀತ ಮಹೋತ್ಸವವು ಎಲ್ಲಾ ವರ್ಗದ ರಸಿಕರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು. ಮರಾಠಿ ಚಲನಚಿತ್ರದ ಖ್ಯಾತ ಸಂಗೀತ ನಿರ್ದೇಶಕ ಶ್ರಿ ದಶರಥ್ ಪೂಜಾರಿ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಈ ಉತ್ಸವದಲ್ಲಿ ಭಾಗವಹಿಸಿದ ಕಲಾವಿದರುಗಳಾಗ ವಿದುಷಿ ಉಮಾನಾಗಭೂಷಣ್, ಮಹೇಶ್ ಕುಲಕರ್ಣಿ, ಫಯಾಜ್ ಅಹಮದ್ (ಹಾಡುಗಾರಿಕೆ), ರಾಘವೇಂದ್ರ ಕುಲಕರ್ಣಿ ಮತ್ತು ವಿನಾಯಕ ನಾಯಕ್ (ತಬಲಂ) ಗುರುಪ್ರಸಾದನ್ ಹೆಗ್ಡೆ (ಹಾರ್ಮೋನಿಯಂ) ರವರು ಕನ್ನಡದವರಾಗಿದ್ದು, ಕನ್ನಡೇತರರ ಮೆಚ್ಚುಗೆಯನ್ನು ಗಳಿಸಿದುದು ವೈಶಿಷ್ಟ್ಯತೆಯಾಗಿತ್ತು.

### ಕರ್ನಾಟಕ ಸಂಘದಲ್ಲಿ ಶಿಕ್ಷಕ ಶಿಕ್ಷಕಿಯರಿಗಾಗಿ ವಿವಿಧ ಸ್ಪರ್ಧೆ

## ಮುಂಬಯಿಯಲ್ಲಿ ಕನ್ನಡದ ಉಳಿವಿಗಾಗಿ ವಿದ್ಯಾಭ್ಯಾಸದ ಮಟ್ಟವನ್ನು ಏರಿಸುವುದು ಅತೀ ಅಗತ್ಯ. - ಯು.ವಿ. ರಾವ್

ಮುಂಬಯಿಯಲ್ಲಿ ಕನ್ನಡದ ಉಳಿವಿಗಾಗಿ ವಿದ್ಯಾಭ್ಯಾಸದ ಮಟ್ಟವನ್ನು ಏರಿಸುವುದು ಅತೀ ಅಗತ್ಯ. ಈ ದಿಶೆಯಲ್ಲಿ ಇಲ್ಲಿ ಕರ್ನಾಟಕ ಸಂಘವು ಸರ್ವ ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಕಳೆದ ಒಂದೆರಡು ವರ್ಷಗಳಿಂದ 'ಇಂದಿರಾ ಶಿವರಾವ್ ಟ್ರಸ್ಟ್'ನವತಿಯಿಂದ ವಿತರಿಸಲಾಗುತ್ತಿರುವ ವಿದ್ಯಾರ್ಥಿವೇತನವು ವಿದ್ಯಾರ್ಥಿಗಳ ಸಹಕಾರವಾದಲ್ಲಿ ತನಗೆ ತುಂಬಾ ಆನಂದ ಹಾಗೂ ತನ್ನ ಪ್ರಯತ್ನ ಸಾರ್ಥಕ ಎಂದು ವಿದ್ಯಾರ್ಥಿವೇತನದ ದಾನಿಗಳಾದ ಸಮಾರಂಭದ ಮುಖ್ಯ ಅತಿಥಿ ಶ್ರೀ ಯು.ವಿ. ರಾವ್‌ರವರು ಕರ್ನಾಟಕ ಸಂಘ, ಮುಂಬಯಿ ದಿನಾಂಕ 15-03-2003ರಂದು ಹಮ್ಮಿಕೊಂಡಿದ್ದ ಕನ್ನಡ ಶಾಲಾ ಶಿಕ್ಷಕ ಶಿಕ್ಷಕಿಯರ ವಿವಿಧ ಸ್ಪರ್ಧೆಯ ಸಮಾರಂಭದಲ್ಲಿ ವಿದ್ಯಾರ್ಥಿವೇತನ ವಿತರಿಸಿ ಮಾತನಾಡಿದರು.

ಇಂದು ಕನ್ನಡದ ಕಾಳಜಿಯನ್ನು ಹೊತ್ತಿರುವ ಹೊರನಾಡ ಕನ್ನಡಿಗರ ಪ್ರಾತಿನಿಧಿತ್ವದ ಸಂಸ್ಥೆಯಾದ ಕರ್ನಾಟಕ ಸಂಘವು ಪ್ರಸ್ತುತ ವರ್ಷದಲ್ಲಿ ತನ್ನ ತಂದೆ ಶ್ರೀ ವ್ಯಾಸರಾಯ ಬಲ್ಲಾಳರ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ ಕನ್ನಡ ಶಾಲಾ ಶಿಕ್ಷಕ ಶಿಕ್ಷಕಿಯರಿಗಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆಯು ತುಂಬಾ ಮಹತ್ವರವಾದ ಕಾರ್ಯವಾಗಿದೆ. ಇಂದಿನ ಕಾರ್ಯಕ್ರಮದ ಪ್ರಾಮುಖ್ಯತೆ ಹಾಗೂ ಸ್ಪರ್ಧೆಯಲ್ಲಿನ ಶಿಕ್ಷಕ ಶಿಕ್ಷಕಿಯರ ಉಲ್ಲಾಸವನ್ನು ತಾನು ತನ್ನ ತಂದೆಯವರಿಗೆ ತಿಳಿಸುವುದಾಗಿ ಸಮಾರಂಭದ ಇನ್ನೋರ್ವ ಅತಿಥಿ ಶ್ರೀ ಅರವಿಂದ ಬಲ್ಲಾಳರು ನುಡಿದರು.

ಬಹುಮಾನ ವಿತರಣಾ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ಎಮ್.ಎಮ್. ಕೋರಿಯವರು ವಹಿಸಿದರು. ಜೊತೆ ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್‌ರವರ ಸ್ವಾಗತ ಭಾಷಣದೊಂದಿಗೆ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಅತಿಥಿಗಳಾದ ಶ್ರೀ ಯು.ವಿ. ರಾವ್ ಹಾಗೂ ಶ್ರೀ ಅರವಿಂದ ಬಲ್ಲಾಳರು ಸ್ಪರ್ಧೆಯ ವಿಜೇತರಿಗೆ ಬಹುಮಾನವನ್ನು ವಿತರಿಸಿದರು. ಜಯಲಕ್ಷ್ಮಿ ಪಾಟೀಲ್, ತುಳಸಿ ಕಲಮುಂಗಿ, ಮೀನ ಬಿ. ಕಳಾವರ, ಹರೀಶ್ ಹೆಜಮಾಡಿ, ಈಶ್ವರ ಅಲೆವೂರ್ ಹಾಗೂ ಅವಿನಾಶ್ ಕಾಮತ್ ಇವರು ಸ್ಪರ್ಧೆಯ ತೀರ್ಪುಗಾರರಾಗಿ ಆಗಮಿಸಿದ್ದರು. ಸ್ಪರ್ಧೆಯನ್ನು ವಿದ್ಯಾವಿಕಾಸ್ ವಿಭಾಗದ ಸಂಯೋಜಕಿ ಡಾ. ಸುನೀತಿ ಉದ್ಯಾವರ, ಓಂದಾಸ್ ಕಣ್ಣಂಗಾರ್ ಮತ್ತು ಎ.ವಿ. ಮೋಘರಾಜ್ ಸಂಯೋಜಿಸಿದರೆ. ಶ್ರೀಮತಿ ಶಾಂಭವಿ ಸುಧಾಕರ್ ಅವರು ಸಭಾಕಾರ್ಯವನ್ನು ನಿರೂಪಿಸಿದರು. ಶ್ರೀ ಎ.ವಿ. ಮೋಘರಾಜ್‌ರವರು ಅಭಿನಂದಿಸಿದರು. ಸಂಘದ ಗೌ. ಕಾರ್ಯದರ್ಶಿ ಶ್ರೀ ಭರತ್‌ಕುಮಾರ್ ಪೊಲಿಪು, ಓಂದಾಸ್ ಕಣ್ಣಂಗಾರ್, ಡಾ. ಸುನೀತಿ ಉದ್ಯಾವರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಸಂಘವು ಕನ್ನಡ ಶಾಲಾ ಶಿಕ್ಷಕ ಶಿಕ್ಷಕಿಯರಲ್ಲಿ ಸ್ಪರ್ಧಾ ಭಾವನೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ವರ್ಷ ಪ್ರಥಮ ಬಾರಿಗೆ ಇಂತಹ ಸ್ಪರ್ಧೆಯನ್ನು ಆಯೋಜಿಸಿದ್ದು ಸ್ಪರ್ಧೆಯಲ್ಲಿ ೧೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕ ಶಿಕ್ಷಕಿಯರು ಪಾಲ್ಗೊಂಡಿದ್ದರು. ಆಶುಭಾಷಣ, ಏಕಪಾತ್ರಾಭಿನಯ, ಸುಗಮ ಸಂಗೀತ, ಪ್ರಬಂಧ ಹಾಗೂ ಪ್ರಶ್ನಾ ಮಂಜೂಷ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯ ಫಲಿತಾಂಶವನ್ನು ಈ ಕೆಳಗಿನಂತಿದೆ.

### ಶಿಕ್ಷಕ ಶಿಕ್ಷಕಿಯರ ಸ್ಪರ್ಧೆಯ ಫಲಿತಾಂಶ

**ಆಶುಭಾಷಣ ಸ್ಪರ್ಧೆ :**

ಪ್ರಥಮ ಬಹುಮಾನ : ಸನತ್‌ಕುಮಾರ್ ಜೈನ್
(ಕೊಲಬಾ ಮ.ನ.ಪಾ. ಕನ್ನಡ ಶಾಲೆ)

ದ್ವಿತೀಯ ಬಹುಮಾನ : ಎಸ್.ಜಿ ಕುಲಕರ್ಣಿ
(ನಿತ್ಯಾನಂದ ಮ.ನ.ಪಾ. ಕನ್ನಡ ಶಾಲೆ)

ತೃತೀಯ ಬಹುಮಾನ : ಆರ್. ಜಿ. ನ್ಯಾಕ್
(ತಿಲಕ್ ನಗರ ಮ.ನ.ಪಾ. ಕನ್ನಡ ಶಾಲೆ)

**ಏಕಪಾತ್ರಾಭಿನಯ**

ಪ್ರಥಮ ಬಹುಮಾನ : ಜಲದೆ ಎಮ್.ಎಸ್.
(ಸಂತ ಕಕ್ಕಯ್ಯ - I ಮ.ನ.ಪಾ. ಕನ್ನಡ ಶಾಲೆ)

ದ್ವಿತೀಯ ಬಹುಮಾನ : ದಿವಾಕರ ಬಂಗೇರ
(ಮೋಂಟ್ಫೊ. ಪೋರ್ಟ್ ರಾತ್ರಿ ಶಾಲೆ)

ತೃತೀಯ ಬಹುಮಾನ : ಅಂಜಲಿ ಶಿದ್ನೋರೆ
(ಚೆಂಬೂರ್ ಕರ್ನಾಟಕ ಶಾಲೆ)

**ಸುಗಮ ಸಂಗೀತ**

ಪ್ರಥಮ ಬಹುಮಾನ : ವಿ.ಜಿ. ಅಧ್ಯಾಪಕ್
(ಶಿವಡಿ ಮ.ನ.ಪಾ. ಕನ್ನಡ ಶಾಲೆ)

ದ್ವಿತೀಯ ಬಹುಮಾನ : ರೆನ್ನಿ ಐವನ್ ಸುವಾರಿಸ್
(ಕಾಜುಪಾಡ ಮ.ನ.ಪಾ. ಕನ್ನಡ ಶಾಲೆ)

ತೃತೀಯ ಬಹುಮಾನ : ಪಾರ್ವತಿ ಎಲ್. ಪೂಜಾರಿ
(ಪಿ.ಎಸ್. ಉದ್ಯಾನ್ ಮ.ನ.ಪಾ. ಕನ್ನಡ ಶಾಲೆ)

**ಪ್ರಬಂಧ ಸ್ಪರ್ಧೆ**

ಪ್ರಥಮ ಬಹುಮಾನ : ಸನತ್‌ಕುಮಾರ್ ಜೈನ್
(ಕೊಲಬಾ ಮ.ನ.ಪಾ. ಕನ್ನಡ ಶಾಲೆ)

ದ್ವಿತೀಯ ಬಹುಮಾನ : ಸುವರ್ಣ ವಿ. ದೀಕ್ಷಿತ್
(ಮರೋಲ್ ಮ.ನ.ಪಾ. ಕನ್ನಡ ಶಾಲೆ)

ತೃತೀಯ ಬಹುಮಾನ : ಹನುಮಂತ ಜಿ. ಪದ್ಮಿ
(ಶಿವಡಿ ಮ.ನ.ಪಾ. ಕನ್ನಡ ಶಾಲೆ)

Regn. No. 040155/83
Regn. No. TECH/47-202/MBI-2002
Date of Posting : 10-4-2003

# ವಡಾಲಾ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಸ್ಥಾಪಕ ದಿನಾಚರಣೆ

## ಸತತ ಪರಿಶ್ರಮದಿಂದ ಯಶಸ್ಸು ಸಾಧ್ಯ -ಟಿ. ಸಿಂಗಾರವೇಲ್

ಸೋಲು ಎನ್ನುವುದು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಸಹಜ ಪ್ರಕ್ರಿಯೆ ಸೋತಾಗ ನಿರಾಶರಾಗದೆ ಸೋಲೇ ಗೆಲುವಿನ ಸೋಪಾನವೆಂಬಂತೆ ಸತತ ಪ್ರಯತ್ನದಿಂದ ಗೆಲುವನ್ನು ಸಾಧಿಸಿದಾಗ ಸಿಗುವ ಗೆಲುವು ಮನಸ್ಸಿಗೆ ತುಂಬಾ ಸಂತೋಷವನ್ನು ನೀಡುತ್ತದೆ. ಸತತ ಪರಿಶ್ರಮದಿಂದ ದುಡಿದಾಗ ಯಶಸ್ಸನ್ನು ಗಳಿಸಲು ಸಾಧ್ಯವೆಂದು ಹೋಮ್ ಗಾರ್ಡ್ಸ್‌ನ ಕಮಾಂಡೆಂಟ್ ಜನರಲ್ ಹಾಗೂ ಮಹಾರಾಷ್ಟ್ರ ಸಿವಿಲ್ ಸರ್ವಿಸಸ್‌ನ ನಿರ್ದೇಶಕರಾದ ಐಪಿಎಸ್ ಅಧಿಕಾರಿ ಟಿ. ಸಿಂಗಾರವೇಲ್ ತಿಳಿಸಿದರು.

ಅವರು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಇತ್ತೀಚೆಗೆ ಜರುಗಿದ ಸ್ಥಾಪಕರ ದಿನಾಚರಣೆಯ ಸಂದರ್ಭದಲ್ಲಿ ಶಾಲಾ ವಾರ್ಷಿಕ ಪತ್ರಿಕೆ ನಂದಾದೀಪ 2003ನ್ನು ಬಿಡುಗಡೆಗೊಳಿಸಿ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು.

ವಾರ್ಷಿಕ ಪತ್ರಿಕೆಯನ್ನು ಪರದೆಯ ಮೇಲೆ ವಿಶಿಷ್ಟ ರೀತಿಯಲ್ಲಿ ಬಿಡುಗಡೆಗೊಳಿಸಲು ಕಾರಣರಾದ ಶಾಲಾ ಶಿಕ್ಷಕ ಪಿ.ಯು. ಪೈಂಟರ್ ಹಾಗೂ ಶಿಕ್ಷಕ ಶಂಕರ ಗಾವಡೆಯವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ ಈ ರೀತಿಯ ಸೃಜನಶೀಲತೆಯನ್ನು ಹೊಂದಿರುವ ಶಿಕ್ಷಕರನ್ನು ಹೊಂದಿರುವುದು ಶಾಲೆಯ ಭಾಗ್ಯ ಎಂದರು.




ಶಾಲಾ ಕಾರ್ಯಕಾರಿ ಸಮಿತಿಯ ಸದಸ್ಯ ಮಂಜುನಾಥಯ್ಯರವರು ಮಾತನಾಡುತ್ತಾ ನಾವು ಹೃದಯ ಶ್ರೀಮಂತಿಕೆಯನ್ನು ಬೆಳೆಸಿಕೊಂಡು ಮಹಾನ್ ವ್ಯಕ್ತಿಗಳ ಆದರ್ಶವನ್ನು ಅವರ ಧ್ಯೇಯ ಧೋರಣೆಗಳನ್ನು ಮೈಗೂಡಿಸಿಕೊಂಡು ಅದನ್ನು ಆಚರಣೆಗೆ ತಂದಾಗ ನಾವು ಆದರ್ಶ ಹಾಗೂ ಪ್ರಭಾವಂತ ನಾಗರಿಕರಾಗಲು ಸಾಧ್ಯವಿದೆ ಎಂದರು.

ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿ ಎಸ್. ಸುಬ್ರಮಣಿಯವರು ಶಾಲೆಯು ನಡೆದು ಬಂದು ದಾರಿ ಸ್ಥಾಪಕರ ದಿನದ ಮಹತ್ವ ಹಾಗೂ ಅವರ ಸೇವೆಗಳನ್ನು ತಿಳಿಸುತ್ತಾ ಇಂದು ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿರುವ ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಪ್ರಶಂಸಿಸುತ್ತಾ ಶಾಲೆಗೆ ಇದುವರೆಗೆ ಹಾಗೂ ಈಗಲೂ ಸಹಾಯ ಮಾಡುತ್ತಿರುವ ವಿದ್ಯಾಭಿಮಾನಿಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಯನ್ನು ಸಲ್ಲಿಸಿದರು.

ಸ್ಥಾಪಕರ ದಿನಾಚರಣೆಯ ಅಂಗವಾಗಿ ಲಲಿತ ಸಹಸ್ರ ಮಂಡಳಿ ವಡಾಲ ಇವರಿಂದ ಲಲಿತ ಸಹಸ್ರ ನಾಮಾರ್ಚನೆ ಹಾಗೂ ಭಜನಾ ಕಾರ್ಯಕ್ರಮಗಳು ನಡೆದು ತದನಂತರ ಶಾಲಾ ಶಿಕ್ಷಕ ಹಾಗೂ ಶಿಕ್ಷಕೇತರ ವರ್ಗದವರಿಂದ ಹಳದಿ ಕುಂಕುಮ ಕಾರ್ಯಕ್ರಮಗಳು-ಜರುಗಿ ಪ್ರತಿ ವರ್ಷದಂತೆ ಸತ್ಯ ನಾರಾಯಣ ಮಹಾ ಪೂಜೆಯು ವಿಧಿವತ್ತಾಗಿ ನೆರವೇರಿತು.

ಇದೇ ಸಂದರ್ಭದಲ್ಲಿ ಡಾ. ಎಸ್. ಸುಬ್ರಮಣ್ಯರವರು ಕೆಲವು ಪರಿಣಾಮ ಸಂಕೀರ್ತನೆಗಳನ್ನು ಹಾಡಿ ನೆರೆದಿದ್ದ ಭಕ್ತಾಭಿಮಾನಿಗಳನ್ನು ಭಕ್ತಿ ಸಾಗರದಲ್ಲಿ ತೇಲಾಡುವಂತೆ ಮಾಡಿದರು. ಸಭಾ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕಿ ಉಮಾ ಮಹೇಶ್ವರಿ ಸ್ವಾಗತಗೈದು ಕಾರ್ಯಕ್ರಮ ನಿರ್ವಹಿಸಿದರೆ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜರಾವ್ ಧನ್ಯವಾದಗೈದರು.

ವರದಿ- ಪ್ರಕಾಶ್ಚಂದ್ರ ಎಂ. ಆರ್.

## ಉತ್ತರ ಭಾರತ ಪ್ರವಾಸಗಳು
## Tours to Historical/ Religious Places

| | | Frequency | Fare | |
|---|---|---|---|---|
| 1) | Delhi – Yamunotri – Gangotri – Badrinath – Kedarnath – Delhi | 1st/ 3rd Friday | 6,500/- | ** |
| 2) | Delhi – Badrinath – Kedarnath – Delhi | Every Mon/Fri | 4,200/- | ** |
| 3) | Delhi – Agra – Allahabad –Varanasi – Gaya – Ayodhya – Delhi | 1st/ 3rd Saturday | 5700/- | ** |
| 4) | Delhi – Shimla – Kullu – Manali – Chandigarh – Delhi | Every Friday | 3,500/- | * |
| 5) | Delhi – Manali – Dalhousie – Vaishnodevi – Amritsar – Chandigarh – Delhi | Every Monday | 5,000/- | * |
| 6) | Delhi – Jaipur – Fathepur Sikri – Agra – Mathura – Delhi (Golden Triangle Tour) | Every Mon/Friday | 1,100/- | * |
| 7) | Delhi – Mussoorie – Haridwar – Rishikesh – Delhi | Every Tue/Friday | 1,000/- | * |
| 8) | AMARNATH YATRA (Once in a year during July coinciding Sravan Poornima) | | 3,500/- | |

** Includes vegetarian food enroute, transport, accommodation & Guide Service

* Includes non A/c room accommodation on twin sharing basis by non A/c coach.

We are running LFC Tours for all banks/ LIC employees. All the above tours are by Super Deluxe buses, starting from our New Delhi office.

Also contact for tours to South India & hotel accommodation bookings all over India

**Contact Our Offices for Advance Reservations :** Bangalore – 2226 2633; Hyderabad – 2330 7658; Vizag – 2745565; Vijaywada – 576624& Chennai – 2538 5253

ನೀವು ದಿಲ್ಲಿಗೆ ಬಂದಾಗ ಅತ್ಯಾಧುನಿಕ ಸೌಕರ್ಯಗಳೊಂದಿರುವ ನೂರಾರು ರೂಮ್‌ಗಳಿರುವ ಹೋಟೆಲ್ ಸದರನ್‌ನಲ್ಲಿ ವಸತಿ ತೆಗೆದುಕೊಳ್ಳಿ. ರುಚಿಯಾದ ಕರ್ನಾಟಕ ಮತ್ತು ಆಂಧ್ರದ ವಿವಿಧ ವ್ಯಂಜನಗಳು ನಮ್ಮ ಹೋಟೆಲ್‌ನಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಸಿಗುವುವು.

**HOTEL SOUTHERN / SOUTHERN TRAVELS PVT. LTD.**

(Recognised by Ministry of Tourism, Govt. of India)

(ದೆಹಲಿಯಲ್ಲಿರುವ ದಕ್ಷಿಣ ಭಾರತದ ಪ್ರಮುಖ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ.)

Head Office: 18/2, Arya Samaj Road, Karol Bagh, New Delhi – 110 005
Ph. 2572 2210,2 573 9508 • Fax: 011-2575 1308 • E-mail: southern@del2.vsnl.net.in

Branch Office: F-38, Dadar Manish Market, Senapati Bapat Marg, Dadar (West), Mumbai – 400 028
Ph: 2432 6895, 2432 6688 • Fax: 2432 6688 • E-mail: southerntravels@vsnl.com

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938